ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಡಿಸೆಂಬರ್ 2020 ಮಾಸ ಪತ್ರಿಕೆ

ಸಂಪುಟ/Volume : 43
ಸಂಚಿಕೆ/Issue : 3
ಪುಟ/Pages : 12
ಬೆಲೆ/Price : ₹ 10/–

**Akhila Karnataka Shikshaka Samachar | December 2020 | Monthly**






**A Journal of Karnataka Rajya Madhyamika Shikshaka Sangha (R.)**

## ಸಂಪಾದಕೀಯ

# ಮನುಕುಲಕ್ಕೆ ಮಾದರಿಯಲ್ಲವೇ? ಮರ್ಯಾದಾ ಪುರುಷೋತ್ತಮ ಶ್ರೀರಾಮ

ಭಾರತ ದೇಶವೆಂಬುದು ಧಾರ್ಮಿಕತೆಯ ನೆಲೆ. ಆದ್ದರಿಂದಲೇ ಇಡೀ ವಿಶ್ವಕ್ಕೆ ಮಾದರಿಯಾಗಿ ನಿಂತಿರುವುದು, ವಿಶ್ವಮಾತೆಯಾಗುವುತ್ತ ಸಾಗಿರುವುದು. ಭಾರತ ದೇಶದ ಧಾರ್ಮಿಕ, ನೈತಿಕ, ಸಾಮಾಜಿಕ ಹಿನ್ನೆಲೆಗಳಿಂದಲೇ ಇಡೀ ವಿಶ್ವ ಭಾರತಮಾತೆಯನ್ನು ಹೊಗಳುತ್ತಿರುವುದು, ಭಾರತಮಾತೆಯತ್ತ ವಾಲುತ್ತಿರುವುದು. ಭಾರತವೆಂದರೆ ಹಿಂದೂಗಳ ನೆಲೆವೀಡು. ಭಗವದ್ಗೀತೆ, ಮಹಾಭಾರತ ಮತ್ತು ರಾಮಾಯಣಗಳು ಭಾರತೀಯರ ಪವಿತ್ರಗ್ರಂಥಗಳು. ಇವೆಲ್ಲವೂ ಭಾರತೀಯರಿಗೆ ಜೀವನಾದರ್ಶಗಳು.

ರಾಮಾಯಣದ ನಾಯಕ ಶ್ರೀರಾಮನೆಂದರೆ ಮರ್ಯಾದಾ ಪುರುಷೋತ್ತಮ. ರಾಮಾಯಣವು ವಾಲ್ಮೀಕಿ ಮಹರ್ಷಿಗಳಿಂದ ರಚಿತವಾಗಿದೆಯೆಂದರೂ, ರಾಮಾಯಣದ ಘಟನೆಗಳು ಘಟಿಸಿರುವುದಕ್ಕೆ ಪುರಾವೆಗಳು ದೊರಕುತ್ತಿವೆ. ವಾಲ್ಮೀಕಿ ರಾಮಾಯಣವನ್ನು ರಾಮನ ಜನ್ಮದಿಂದ ಹಿಡಿದು ಅವರ ಅವತಾರ ಸಮಾಪ್ತಿಯವರೆಗಿನ ಜೀವನವನ್ನು ಸಾಮಾನ್ಯವಾಗಿ ಏಳುಕಾಂಡಗಳಾಗಿ ವಿಭಜಿಸಲಾಗಿದೆ. 1. ಬಾಲಕಾಂಡ 2. ಅಯೋಧ್ಯಾ ಕಾಂಡ 3. ಅರಣ್ಯ ಕಾಂಡ 4. ಕಿಷ್ಕಿಂಧಾ ಕಾಂಡ 5. ಸುಂದರ ಕಾಂಡ 6. ಯುದ್ಧ ಕಾಂಡ ಮತ್ತು 7. ಉತ್ತರಕಾಂಡ. ರಾಮಾಯಣದ ಪ್ರತಿಯೊಂದು ಸಾಲು ಸಹ ಇಡೀ ಮಾನವಕುಲವೇ ಜೀವನಕ್ಕಳವಡಿಸಿಕೊಳ್ಳಲು ಯೋಗ್ಯವಾದದ್ದು.

ಆದರ್ಶ ಮನುಷ್ಯನ ಗುಣಗಳಾದ ನೀತಿವಂತ, ಶೂರ, ಧರ್ಮವನ್ನು ತಿಳಿದವನು, ಮಾಡಿದ ಸಹಾಯವನ್ನು ನೆನೆಪಿನಲ್ಲಿಟ್ಟುಕೊಳ್ಳುವವನು, ಸತ್ಯವನ್ನು ನುಡಿಯುವವನು, ಮನೋನಿಶ್ಚಯಕ್ಕೆ ಒಳಗಾದವನು, ಒಳ್ಳೆಯ ನಡತೆಯುಳ್ಳವನು, ಎಲ್ಲ ಜೀವಿಗಳ ಹಿತವನ್ನು ಬಯಸುವವನು, ಎಲ್ಲ ವಿದ್ಯೆಗಳನ್ನು ಬಲ್ಲವನು, ಸಮರ್ಥನು, ಧೈರ್ಯಸ್ಥ, ಕೋಪವನ್ನು ಗೆದ್ದವನು, ಕಾಂತಿಯುಳ್ಳವನು, ಅಸೂಯೆ ಇಲ್ಲದವನು, ಪರಿಸರ ಸಂರಕ್ಷಕನು.

ನಾವು ಯಾವುದೇ ಪವಿತ್ರಗ್ರಂಥಗಳನ್ನು ಓದುತ್ತೇವೆಂದರೂ ಅದರ ಉದ್ದೇಶ ಈ ಮೇಲಿನ ಆದರ್ಶಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದೇ ಆಗಿದೆ. ಈ ಮೇಲಿನ ಎಲ್ಲಾ ಗುಣಗಳನ್ನು ನಾವು ರಾಮಾಯಣದ ರಾಮನಲ್ಲಿ ಕಾಣಬಹುದು. ರಾಷ್ಟ್ರದ ಆತ್ಮ ರಾಮ, ಎಲ್ಲಾ ಮೌಲ್ಯಗಳನ್ನು ಎತ್ತಿಹಿಡಿಯುವ ಮೌಲ್ಯಗಳ ಪ್ರತೀಕ ರಾಮ. ರಾಮ ಜೀವನಾದರ್ಶ. ಎಲ್ಲಾ ಧರ್ಮಗಳಿಗೂ ಹೊಂದುವ ವ್ಯಕ್ತಿ ರಾಮ. ಎಲ್ಲಾ ಧರ್ಮಗಳು ಬಯಸುವುದು ಮನುಷ್ಯನಲ್ಲಿ ಈ ಮೇಲಿನ ಆದರ್ಶ ಗುಣಗಳಲ್ಲವೇ?

ಹಿಂದಿನ ಕಾಲಕ್ಕಷ್ಟೇ ಅಲ್ಲದೇ ಇಂದಿಗೂ ಪ್ರಸ್ತುತತೆಯನ್ನು ಪಡೆಯುವ ರಾಮನ ಗುಣಗಳೇ ವಿಶಿಷ್ಟ. ರಾಮನಿಗೆ ಪ್ರಜೆಗಳ ಹಿತಾಸಕ್ತಿಯೇ ಅತ್ಯಮೂಲ್ಯವಾಗಿದ್ದಿತು(ಪೌರಾನ್ ಸ್ವಜನವತ್ ನಿತ್ಯಂ ಕುಶಲಂ ಪರಿಪೃಚ್ಛತಿ-ದೇಶದ ಪ್ರಜೆಗಳನ್ನು ಯಾವಾಗಲೂ ತನ್ನವರೆಂಬಂತೆ ಅಕ್ಕರೆಯಿಂದ ವಿಚಾರಿಸಿಕೊಳ್ಳುತ್ತಿದ್ದರು). ಪ್ರಜೆಗಳ ಹಿತಕ್ಕಾಗಿ, ಸಂತೋಷಕ್ಕಾಗಿ ರಾಜ್ಯವನ್ನು ತ್ಯಜಿಸಿದ ರಾಮನ ಗುಣವೇ ಇಂದಿನ ರಾಜಕಾರಣಿಗಳಿಗೆ ಆದರ್ಶವಾಗಬೇಕು. ಹೆತ್ತ ತಂದೆ-ತಾಯಿಯರ ವಚನಪಾಲನೆಗಾಗಿ ಎಲ್ಲವನ್ನು ತ್ಯಜಿಸಿ, ಎಂತಹ ಕಷ್ಟವನ್ನು ಸಹಿಸಿದ ರಾಮನೇ, ಇಂದಿನ ಮಕ್ಕಳಿಗೆ ಆದರ್ಶವಾಗಬೇಕು. ಎಂತಹ ಕಷ್ಟ ಬಂದರೂ ನೀತಿಪಾಲನೆಯನ್ನು ತ್ಯಜಿಸದ ಶ್ರೀರಾಮ ಮನುಕುಲಕ್ಕೆ ಆದರ್ಶವಾಗಬೇಕು. ತನ್ನ ಬಳಿ ಸಿಗುವ ವಸ್ತುಗಳಿಂದಲೇ ತನ್ನ ಕಷ್ಟವನ್ನು ಪರಿಹರಿಸಿಕೊಳ್ಳುವ ಶಕ್ತಿಯುಳ್ಳ ಶ್ರೀರಾಮನ ಚಾಣಾಕ್ಷತನವೇ ಇಂದಿನ ವಿದ್ಯಾರ್ಥಿಗಳಿಗೆ ಆದರ್ಶವಾಗಬೇಕು. ತನ್ನ ಜೀವನದ ನಡೆಯಿಂದಲೇ ಇತರರಿಗೆ ಅನುಭವಾಮೃತ ನೀಡಿದ ಶ್ರೀರಾಮನೇ ಮನುಕುಲಕ್ಕೆ ಆದರ್ಶವಾಗಬೇಕು. ಎಂತಹ ಕಷ್ಟದ ಸಮಯದಲ್ಲೂ ತಾಳ್ಮೆ ಕಳೆದುಕೊಳ್ಳದೇ ಅತ್ಯಂತ ತಾಳ್ಮೆಯಿಂದ ಇತರರೊಂದಿಗೆ ಬೆರೆಯುವುದನ್ನು ನಾವೆಲ್ಲರೂ ಕಲಿಯಬೇಕಾದದ್ದು ಶ್ರೀರಾಮನಿಂದಲೇ. ಇರುವುದರಲ್ಲಿಯೇ, ಇರುವಲ್ಲಿಯೇ (ವನವಾದರೂ) ಸುಖ, ನೆಮ್ಮದಿಯಿಂದ ಗೌರವಯುತ ಜೀವನ ಮಾಡುವುದನ್ನು ನಾವು ಕಲಿಯಬೇಕಾದದ್ದು ಶ್ರೀರಾಮನಿಂದಲೇ. ಕಾಡಿನ ಸಕಲ ಪ್ರಾಣಿ-ಪಕ್ಷಿಗಳೂ ತಮ್ಮಂತೆಯೇ ಎಂದು ಭಾವಿಸಿದ ಶ್ರೀರಾಮನೂ ಇಂದಿನ ಜನಾಂಗಕ್ಕೆ ಮಾದರಿಯಾಗಬೇಕು ಹಾಗೂ ಸಕಲ ಪ್ರಾಣಿ-ಪಕ್ಷಿಗಳನ್ನು ಕಾಪಾಡುವತ್ತ ಸಾಗಬೇಕು. ಅಯೋಧ್ಯೆಗೆ ರಾಜನಾದರೂ ತನಗಿಂತ ಹಿರಿಯರು, ಕಿರಿಯರು ಎನ್ನದೇ ಎಲ್ಲರ ಅಭಿಪ್ರಾಯ ಸ್ವೀಕರಿಸಿ, ಅತ್ಯುತ್ತಮ ನಿರ್ಧಾರಗಳನ್ನು ಕೈಗೊಳ್ಳುತ್ತ ರಾಜ್ಯಭಾರವನ್ನು ಮಾಡಿದ ಶ್ರೀರಾಮ ನಾಡಿನ ರಾಜಕಾರಣಿಗಳಿಗೆ ಹಾಗೂ ಮನೆಯ ಹಿರಿಯರಿಗೆ ಆದರ್ಶವಾಗಬೇಕು. ಕೀಳುಜಾತಿ-ಮೇಲ್ಜಾತಿ ಎಂಬ ಬೇಧಭಾವವಿಲ್ಲದೇ ಶಬರಿ ನೀಡಿದ ಎಂಜಲು ಹಣ್ಣನ್ನು ತಿಂದು ಸಂತೃಪ್ತಿ ಪಟ್ಟ ಶ್ರೀರಾಮ ಇಂದಿನ ಸಾಮಾಜಿಕ ಅಸಮಾನತೆಯನ್ನು ಹುಟ್ಟು ಹಾಕುತ್ತಿರುವವರಿಗೆ ಆದರ್ಶವಾಗಬೇಕು.

ಸರ್ವರಿಗೂ ಒಳಿತನ್ನು ಬಯಸಿದ, ಸಕಲ ಆದರ್ಶ ಗುಣಗಳನ್ನು ಒಳಗೊಂಡ ಶ್ರೀರಾಮ ಚಂದ್ರರೇ ಸಕಲ ಧರ್ಮಗಳಿಗೂ, ಸಕಲ ಜೀವರಾಶಿಗಳಿಗೂ ಆದರ್ಶಪ್ರಾಯರಲ್ಲವೇ?.....

-----

ಪರಮಾತ್ಮನಲ್ಲಿ ಶರಣಾಗಿ ಸಾಧನೆಯಲ್ಲಿ ತತ್ಪರರಾಗಬೇಕು. ನಾಶಯುತವಾದ ಕ್ಷಣಭಂಗುರವಾದ ಪ್ರಪಂಚದ ಅಶಾಶ್ವತಭೋಗಗಳನ್ನು ಅನುಭವಿಸುವುದರಲ್ಲಿಯೇ ತಮ್ಮ ಜೀವನದ ಅಮೂಲ್ಯ ಸಮಯ ಕಳೆದುಹೋಗಬಾರದೆಂಬ ಲೋಕ ಸತ್ಯವನ್ನು ತಿಳಿಸುವ ಭಗವದ್ಗೀತೆಯ ಜಯಂತಿಯನ್ನು ನಾವೆಲ್ಲರೂ ಡಿಸೆಂಬರ್ 25ರಂದು ಆಚರಿಸಿದ್ದೇವೆ. ಭಗವದೀತೆಯ ಪಠಣವೂ, ಪ್ರವಚನವೂ ಕ್ಲೇಶವನ್ನೂ ದೂರಮಾಡಲಿ, ಜಗದೋದ್ಧಾರಕನಾದ ಶ್ರೀಕೃಷ್ಣನು ಸಕಲಜೀವರಾಶಿಗಳಿಗೂ ಚೈತನ್ಯವನ್ನು ತುಂಬಲಿ. ಆರೋಗ್ಯಯುಕ್ತ ಸಮಾಜ ನಿರ್ಮಾಣವಾಗಿ ಜಗವು ನಲಿವಿನಿಂದ ಸುಖಶಾಂತಿಯಿಂದಿರಲಿ.

-----

ನಮ್ಮೆಲ್ಲಾ ಸನ್ಮಿತ್ರ ಓದುಗರಿಗೆ ತಿಳಿದಿರುವಂತೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ದಿನಾಂಕ 12.01.2020 ರಿಂದ 23.01.2020ರವರೆಗೆ ಪ್ರತಿವರ್ಷವೂ ಸಂಕಲ್ಪ ದಿನವನ್ನು ಆಚರಿಸುತ್ತದೆ. ಎಲ್ಲಾ ಕಾರ್ಯಕರ್ತರೂ ಸಂಕಲ್ಪ ದಿನವನ್ನು ಆಚರಿಸಿ, ಕಾರ್ಯಕ್ರಮದ ವರದಿ ಮತ್ತು ಪೋಟೋವನ್ನು ಮೇಲ್ ಮಾಡಬೇಕಾಗಿ ವಿನಂತಿ.

-----

ತಮಗೆಲ್ಲಾ ತಿಳಿದಿರುವಂತೆ ಅಯೋಧ್ಯೆಯಲ್ಲಿ ಭವ್ಯ ರಾಮಮಂದಿರದ ನಿರ್ಮಾಣವಾಗಬೇಕೆಂಬ ಸಂಕಲ್ಪ ಕೈಗೂಡುವ ಕಾಲ ಸನ್ನಿಹಿತವಾಗಿದೆ. ರಾಮಮಂದಿರ ನಿರ್ಮಾಣದ ಕಾರ್ಯದಲ್ಲಿ ಪ್ರತಿ ಭಾರತೀಯರೂ ಭಾಗವಹಿಸಬೇಕೆಂಬುದು ಸಂಕಲ್ಪ. ಆದ್ದರಿಂದ ರಾಮಮಂದಿರ ನಿರ್ಮಾಣದ ಈ ಕನಸನ್ನು ನನಸು ಮಾಡಲು ತಮ್ಮ ಬಳಿ ಕರಸೇವಕರು ಧನಸಂಗ್ರಹಕ್ಕಾಗಿ ಬರಬಹುದು. ಪ್ರತಿ ವ್ಯಕ್ತಿ ಕೇವಲ 10 ರೂ ಹಾಗೂ ಪ್ರತಿ ಮನೆಯಿಂದ ಕೇವಲ 100 ರೂ ಗಳನ್ನು ನೀಡಿ ಈ ಪವಿತ್ರ ಕಾರ್ಯದಲ್ಲಿ ನಮ್ಮನ್ನೆಲ್ಲಾ ನಾವೇ ತೊಡಗಿಸಿಕೊಳ್ಳೋಣ.

ಸಂಪಾದಕ

## ಸೂಕ್ತಿ



ಈ ಮಾನವ ದೇಹ
ಲಭಿಸಿದ್ದರಿಂದ ನೀನು
ಅದೃಷ್ಟಶಾಲಿ.
ಎಷ್ಟು ಸಾಧ್ಯವೋ ಅಷ್ಟು
ದೇವರಿಗೆ ಪ್ರಾರ್ಥನೆ ಸಲ್ಲಿಸು.
ನೀನು ಕಠಿಣ ಶ್ರಮ ವಹಿಸಿ
ಕೆಲಸ ಮಾಡಬೇಕು.
ಶ್ರಮವಿಲ್ಲದೆ ಏನನ್ನೂ
ಪಡೆಯಲಾಗದು.

- ಶ್ರೀಮಾತೆ ಶಾರದಾದೇವಿ

## ಪರಿವಿಡಿ


- ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘಕ್ಕೆ ಏಕೆ ಸದಸ್ಯರಾಗಬೇಕು? 3
- ರಾಮಮಂದಿರ ಇತಿಹಾಸ 4
- ನಾವೂ ಹೀಗಾಗಬಹುದೇ? 5
- ಸಂಕಲ್ಪದಿನ – ವಿವೇಕಾನಂದರ ಜನ್ಮದಿನ 6
- ಭಾರತ ಪರಿಚಯ 7
- ಶಿಕ್ಷಕನೆಂಬ ನಾಯಕ 8
- ಶ್ರೀರಾಮಮಂದಿರಕ್ಕೆ ಶುಭ ಮುಹೂರ್ತ 9
- ಕಾರ್ಯಕಾರಿಣಿ ಮತ್ತು ಸಾಮಾನ್ಯ ಸಭೆ ವರದಿ 11

# ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘಕ್ಕೆ ಏಕೆ ಸದಸ್ಯರಾಗಬೇಕು?

**ಚಿದಾನಂದ ಆ. ಪಾಟೀಲ**
**ರಾಜ್ಯ ಪ್ರಧಾನಕಾರ್ಯದರ್ಶಿ**
**ಕ.ರಾ.ಮಾ.ಶಿ.ಸಂ.**



ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು (ರಿ) ಕರ್ನಾಟಕದ ಅತ್ಯಂತ ಹಿರಿಯ ಶಿಕ್ಷಕ ಸಂಘಟನೆ. 1967ರಲ್ಲಿ ಕರ್ನಾಟಕ ಸರ್ಕಾರದ ಸೊಸೈಟಿ ಆ್ಯಕ್ಟ್ ಅಡಿಯಲ್ಲಿ ನೊಂದಾವಣೆಯಾಗಿ ರಾಷ್ಟ್ರೀಯ ಮನೋಭಾವದ ದೃಷ್ಟಿಕೋನದಿಂದ ಕರ್ನಾಟಕದ ಶೈಕ್ಷಣಿಕ ಕ್ಷೇತ್ರದ ಅಭಿವೃದ್ಧಿಗಾಗಿ ಹಾಗೂ ಶಿಕ್ಷಕ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಕಾರ್ಯ ಮಾಡುತ್ತ ಬಂದಿದೆ, ಇದಲ್ಲದೇ ರಾಷ್ಟ್ರಮಟ್ಟದಲ್ಲಿ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಕೆನಡಿಯನ್ ಟೀಚರ್ಸ್ ಫೆಡರೇಷನ್ ಜೊತೆಯಲ್ಲಿ ಕಾರ್ಯ ಮಾಡುತ್ತಿದೆ.

ಕರ್ನಾಟಕದಲ್ಲಿ ಶಿಕ್ಷಣ ಇಲಾಖೆ ಜೊತೆಗೂಡಿ ಮಾಡಿರುವ ಪ್ರಮುಖ ಕಾರ್ಯಗಳು,

- ವಿಜ್ಞಾನ ಕ್ಷೇತ್ರಕ್ಕೆ ಭಾರತೀಯ ಕೊಡುಗೆಗಳು ಎನ್ನುವ ವಿಷಯದ ಗೋಡೆ ಪೋಸ್ಟರ್‌ಗಳನ್ನು ರಾಜ್ಯದ ಎಲ್ಲ ಶಾಲೆಗಳಿಗೆ ಹಂಚಿರುವುದು.
- ಡಿ.ಎಸ್.ಇ.ಆರ್.ಟಿಯ ಸಹಯೋಗದೊಂದಿಗೆ ಶಿಕ್ಷಕರಿಗೆ ಮೌಲ್ಯ ಶಿಕ್ಷಣದ ತರಬೇತಿ ನೀಡಿರುವುದು.
- **ಪ್ರತಿಭಾ ಪುರಸ್ಕಾರ:** ಪ್ರತಿ ವರ್ಷವು ನಾಡಿನ ಹಿರಿಯರಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಪುರಸ್ಕರಿಸುತ್ತ ಬಂದಿರುವುದು.
- ಗುರುವಂದನಾ ಕಾರ್ಯಕ್ರಮದ ಮೂಲಕ ಪ್ರತಿ ವರ್ಷ ಗುರುಪೂರ್ಣಿಮೆಯಿಂದ ಹತ್ತು ದಿನಗಳ ಕಾಲ ಭಾರತೀಯ ಗುರು ಪರಂಪರೆಯನ್ನು ಶಿಕ್ಷಕರಿಗೆ ನೆನಪಿಸುವ ಕಾರ್ಯ ಮಾಡುತ್ತಿದೆ.
- ಕರ್ತವ್ಯ ಬೋಧ ದಿವಸ ಪ್ರತಿ ವರ್ಷ ಜನವರಿ 12 ರಿಂದ 23ರವರೆಗೆ ಶಿಕ್ಷಕರಿಗೆ ತಮ್ಮ ಕರ್ತವ್ಯದ ಮಹತ್ವವನ್ನು ತಿಳಿಸುವ ಕಾರ್ಯಕ್ರಮಗಳ ಆಯೋಜನೆ ಮಾಡುತ್ತದೆ.
- ಶಿಕ್ಷಕರಿಗೆ ಕಾರ್ಯಾಗಾರಗಳನ್ನು ಆರೋಗ್ಯ ಶಿಬಿರಗಳು, ಸೇವಾ ಮಾಹಿತಿಗಳ ತಿಳುವಳಿಕೆಯ ಕಾರ್ಯಕ್ರಮಗಳನ್ನು ಮಾಡುತ್ತ ಬಂದಿದೆ.
- **ಶೈಕ್ಷಣಿಕ ಮತ್ತು ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದನೆ:** ಎಪ್ಪತ್ತರ ದಶಕದಲ್ಲಿ ಶಿಕ್ಷಕರಿಗೆ ಚೆಕ್ ಮೂಲಕ ವೇತನ ನೀಡಬೇಕು ಎಂದು ಪ್ರಾರಂಭವಾದ ಹೋರಾಟಗಳು ಇಂದಿನ ಅನೇಕ ಸಮಸ್ಯೆಗಳಿಗೆ ಶಿಕ್ಷಕ ಸಂಘ ಸ್ಪಂದಿಸುತ್ತ ಬಂದಿರುವುದು ಇದರಲ್ಲಿ ನಾಡಿನ ಅನೇಕ ಶಿಕ್ಷಣ ತಜ್ಞರು, ಹೋರಾಟಗಾರರು ಭಾಗವಹಿಸಿದ್ದಾರೆ
- **ರೇಡಿಯೊ ಪಾಠಗಳು:** ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ವಿದ್ಯಾರ್ಥಿಗಳಿಗೆ ಪರೀಕ್ಷೆಯ ದೃಷ್ಟಿಯಿಂದ ರೇಡಿಯೊ ಪಾಠಗಳನ್ನು ಆಯೋಜಿಸುತ್ತ ಬಂದಿದೆ.
- **ಫೋನ್ ಇನ್ ಕಾರ್ಯಕ್ರಮ:** ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ತಮ್ಮ ಕಲಿಕೆಯಲ್ಲಿ ಉಂಟಾಗುವ ಗೊಂದಲಗಳ ಪರಿಹಾರಕ್ಕಾಗಿ ಪ್ರತಿ ವರ್ಷ ಜನವರಿಯಿಂದ ಮಾರ್ಚ್‌ವರೆಗೆ ಫೋನ್ ಇನ್ ಕಾರ್ಯಕ್ರಮವನ್ನು ಆಯೋಜಿಸುತ್ತದೆ.
- ತಮಿಳುನಾಡಿನಲ್ಲಾದ ಸುನಾಮಿ, ಕರ್ನಾಟಕದ ಉತ್ತರ ಭಾಗದಲ್ಲಾದ ಪ್ರವಾಹ ಮತ್ತು ಪಶ್ಚಿಮ ಘಟ್ಟಗಳಲ್ಲಾದ ಬೆಟ್ಟ ಕುಸಿತದಂತಹ ನೈಸರ್ಗಿಕ ವಿಕೋಪಗಳಲ್ಲು ಸಂಘವು ಸ್ಪಂದಿಸುತ್ತ ಬಂದಿದೆ.
- ನಾಡಿನ ಅನೇಕ ಶಿಕ್ಷಣ ತಜ್ಞರು ಇಂದಿಗೂ ಮಾಧ್ಯಮಿಕ ಶಿಕ್ಷಕ ಸಂಘಕ್ಕೆ ಮಾರ್ಗದರ್ಶನ ಮಾಡುತಿದ್ದಾರೆ.

ರಾಷ್ಟ್ರೀಯ ಮನೋಭಾವದ ಅನೇಕ ಹಿರಿಯ ಅಧ್ಯಾಪಕರು ಈ ಸಂಘಕ್ಕೆ ನಿರಂತರವಾಗಿ ಸೇವಾ ಮನೋಭಾವದಿಂದ ಕಾರ್ಯ ಮಾಡುತ್ತ ಬಂದಿದ್ದು, ಇಂದು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ತನ್ನ ಶಾಖೆಗಳನ್ನು ಹೊಂದಿದ್ದು, ಶಿಕ್ಷಣ ಕ್ಷೇತ್ರದ ಬೆಳವಣಿಗೆಗೆ ಪೂರಕವಾಗಿ ಕಾರ್ಯ ಮಾಡುತ್ತ ಬಂದಿದೆ.

ಪ್ರಸಕ್ತ ವರ್ಷ ಕರೋನಾ ಸಂಕಷ್ಟದ ಕಾಲದಲ್ಲಿ ಶಿಕ್ಷಣದ ಮತ್ತು ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸುತ್ತ ಬಂದಿರುವ ಮಾಧ್ಯಮಿಕ ಶಿಕ್ಷಕ ಸಂಘ ಪ್ರತಿವರ್ಷ ಜೂನ್ ತಿಂಗಳಲ್ಲಿ ಸದಸ್ಯತ್ವ ಅಭಿಯಾನ ನಡೆಸುತ್ತಿತ್ತು. ಆದರೆ ಈ ವರ್ಷ ಡಿಸೆಂಬರ್–2020 ರಿಂದ ಜನವರಿ 2021ರವರೆಗೆ ಸದಸ್ಯತ್ವ ಅಭಿಯಾನ ನಡೆಸಲು ಕೇಂದ್ರ ಕಾರ್ಯಕಾರಿ ಮಂಡಳಿ ತೀರ್ಮಾನಿಸಿರುವುದರಿಂದಾಗಿ ಎಲ್ಲ ಶಿಕ್ಷಕ ಬಂಧುಗಳೂ ಸದಸ್ಯತ್ವ ಅಭಿಯಾನದಲ್ಲಿ ತೊಡಗಬೇಕು. ಮೊದಲು ತಾವು ಸದಸ್ಯರಾಗುವುದು ಮತ್ತು ತಮ್ಮ ಸುತ್ತಲಿನ ಶಾಲೆಗಳ ಶಿಕ್ಷಕರನ್ನು ಸದಸ್ಯರನ್ನಾಗಿ ಮಾಡಬೇಕು. ಈ ವರ್ಷ ಆನ್‌ಲೈನ್ ಸದಸ್ಯತ್ವವು ಪ್ರಾರಂಭವಾಗಿರುವುದರಿಂದಾಗಿ www.krmssmebership.com ಗೆ ಭೇಟಿ ನೀಡಿ ತಾವು ಸದಸ್ಯ ರಾಗಬಹುದು. ಇಲ್ಲದಿದ್ದರೆ ಸ್ಥಳೀಯ ಕಾರ್ಯಕರ್ತರನ್ನು ಸಂಪರ್ಕಿಸಿ ಸದಸ್ಯರಾಗಬಹುದು. ಹೆಚ್ಚಿನ ಮಾಹಿತಿಗಾಗಿ kssta55@gmail.com ಗೆ ಇಲ್ಲಿಗೆ ಮೇಲ್ ಕಳುಹಿಸಬಹುದು. ತಮ್ಮೆಲ್ಲರ ಸದಸ್ಯತ್ವವೇ ಸಂಘಟನೆಗೆ ಶಕ್ತಿ. •

# ರಾಮಮಂದಿರ ಇತಿಹಾಸ

**ಡಾ॥ ಟಿ. ಎನ್. ಲೋಕೇಶ್**
**ಶಿಕ್ಷಣ ತಜ್ಞರು ಮತ್ತು ಚಿಂತಕರು**



ಅಯೋಧ್ಯೆ ಸಕಲ ಹಿಂದೂಗಳ ಪಾವನ ಪುಣ್ಯಕ್ಷೇತ್ರ. ಸಮಸ್ತ ಮಾನವ ಜನಾಂಗದ ಮೇರು ವ್ಯಕ್ತಿತ್ವಕ್ಕೆ ಪ್ರತೀಕವಾದ ಪ್ರಭು ಶ್ರೀರಾಮಚಂದ್ರನಿಗೆ ಜನ್ಮ ನೀಡಿದ ಸ್ಥಳ ಅಯೋಧ್ಯೆ. ಯುಗ ಯುಗಗಳಿಂದ ಭಾರತೀಯರ ಅಸ್ಮಿತೆಯ ಸಂಕೇತವನ್ನು ಸಾರಿದ ಮೇರುಸದೃಶ ನಗರಿ ಅಯೋಧ್ಯೆ.

ಸನಾತನ ಭಾರತೀಯ ಇತಿಹಾಸದಲ್ಲಿನ ಪುರಾವೆಗಳ ಪ್ರಕಾರ ಭರತವರ್ಷವನ್ನು ಧರ್ಮ, ಸತ್ಯ ಮತ್ತು ತ್ಯಾಗಗಳ ಮೂಲಕ ಪರಿಪಾಲನೆ ಮಾಡಿ, ಸುಭೀಕ್ಷ ಕೋಸಲ ಸಾಮ್ರಾಜ್ಯದ ರಾಜಧಾನಿಯಾಗಿ ಅಯೋಧ್ಯೆಯನ್ನು ಪಾಲಿಸಿದ್ದ ಇಕ್ಷ್ವಾಕುವಂಶ ಇಂದಿಗೂ ಆದರಣೀಯ. ಇಕ್ಷ್ವಾಕು ವಂಶದ ಪರಂಪರೆಯಲ್ಲಿ ರಾಮನ ನಂತರ ಮಹಾರಾಜ ಸಗರ, ಭಗೀರಥ, ಸತ್ಯಹರಿಶ್ಚಂದ್ರ ಹಾಗೂ ದಿಲೀಪರ ದಿವ್ಯ ನೆನಪುಗಳನ್ನು ಅಯೋಧ್ಯೆ ತನ್ನೊಡಲಿನಲ್ಲಿ ಅಡಗಿಸಿಕೊಂಡಿದೆ. ಪ್ರಭು ಶ್ರೀರಾಮಚಂದ್ರನಿಗೆ ಜನ್ಮವಿತ್ತ ಭೂಮಿ, ಆತನ ಲಾಲನೆ–ಪಾಲನೆ ಪೋಷಿಸಿದ ಭೂಮಿ, ಆತನ ರಾಮರಾಜ್ಯಕ್ಕೆ ಸಾಕ್ಷಿಯಾದ ಭೂಮಿ ಅಯೋಧ್ಯೆ. ರಾಮಜನ್ಮಸ್ಥಾನದಲ್ಲಿ ರಾಮಮಂದಿರದ ಅಸ್ತಿತ್ವ ಇಂದು ನಿನ್ನೆಯದಲ್ಲ. ಯುಗಯುಗಗಳಿಂದಲೂ ಅಯೋಧ್ಯೆಯಲ್ಲಿ ಭವ್ಯವಾದ ರಾಮಮಂದಿರವಿತ್ತು ಎಂಬುದನ್ನು ಇತಿಹಾಸ ಪದೇ ಪದೇ ಪುನರುಚ್ಚರಿಸಿದೆ. ರಾಮನ ನಂತರ ಆತನ ಮಗ 'ಕುಶ' ಅಯೋಧ್ಯೆಯನ್ನು ಪುನಃ ನಿರ್ಮಿಸಿದ ಎಂಬುದು ಐತಿಹ್ಯ. ಕಾಲಾನಂತರದಲ್ಲಿ ರಾಜಾ ವಿಕ್ರಮಾದಿತ್ಯರು ರಾಮಮಂದಿರವನ್ನು ಜೀರ್ಣೋದ್ಧಾರಗೊಳಿಸಿದ್ದ. ಜೈನಧರ್ಮದ ಐದು ತೀರ್ಥಂಕರರು ಪಾವನ ನಗರಿ ಅಯೋಧ್ಯೆಯಲ್ಲಿ ಜನ್ಮತಾಳಿದ್ದರು. ವರಕವಿ ಕಾಳೀಮಾತೆಯ ವರಪುತ್ರ ಕಾಳಿದಾಸ ತನ್ನ ರಘುವಂಶ ಕಾವ್ಯದಲ್ಲಿ ಅಯೋಧ್ಯೆಯನ್ನು ಉಲ್ಲೇಖಿಸಿದ್ದಾನೆ. ಜಗತ್ತಿಗೆ ಬೆಳಕು ನೀಡಿದ ದಿವ್ಯಾತ್ಮ ಗೌತಮಬುದ್ಧನು ಅಯೋಧ್ಯೆಗೆ ಭೇಟಿಕೊಟ್ಟಿದ್ದ ಎಂಬುದು ಶಾಸನದಿಂದ ದೃಢಪಟ್ಟಿದೆ. ಹೀಗೆ ಅಯೋಧ್ಯೆ ಭಾರತೀಯರ ದಿವ್ಯ ಜೀವನಕ್ರಮದೊಂದಿಗೆ ಬೆರೆತು ಹೋಗಿದೆ.

ಮಧ್ಯಕಾಲೀನ ಭಾರತದ ಇತಿಹಾಸದಲ್ಲಿ ಕಂಡು ಬರುವ ಪರಕೀಯರ ನಿರಂತರ ಆಕ್ರಮಣಗಳು ರಾಷ್ಟ್ರದ ಭೌತಿಕ ಸಂಪತ್ತನ್ನು ಬರಿದು ಮಾಡಿಬಿಟ್ಟವು. ಆದರೆ ಭಾರತೀಯರ ಮನಸ್ಸಿನಿಂದ ರಾಮಮಂದಿರ ಪರಿಕಲ್ಪನೆಯನ್ನು ದೂರಮಾಡಲಾಗಲಿಲ್ಲ. ಮುಸ್ಲಿಂ ದಾಳಿಕೋರರು ಮಂದಿರಗಳ ಮೇಲೆ ನಡೆಸಿದ ಅತ್ಯಾಚಾರ, ಕ್ರೌರ್ಯದಂತಹ ಅಮಾನುಷ ಕೃತ್ಯಗಳನ್ನು ಮಾನವನ ಇತಿಹಾಸ ಎಂದಿಗೂ ಕ್ಷಮಿಸುವುದಿಲ್ಲ. ಇದೆಲ್ಲವನ್ನು ಅನುಭವಿಸಿದ ಹಿಂದೂ ಸಮಾಜದ ಧರ್ಮಸಹಿಷ್ಣುತೆ ಜಗತ್ತಿಗೆ ಮಾದರಿಯಾಗುವಂತದ್ದು. ಈ ಸಂಘರ್ಷದಲ್ಲಿ ದೇಹಗಳು ಉರುಳಿದವು, ಆದರೆ ರಾಮಮಂದಿರದ ಕಲ್ಪನೆ ಅಳಿಯಲಿಲ್ಲ. ಕ್ರಿ.ಶ.1528ರಲ್ಲಿ ಮೊಘಲ್‌ದೊರೆ ಬಾಬರ್ ಸೇನಾಧಿಪತಿ ಮೀರ್‌ಬಾಕಿ ರಾಮಮಂದಿರವನ್ನು ಧ್ವಂಸ ಮಾಡಿ, ಅಳಿದುಳಿದ ಮಂದಿರದ ಗೋಡೆಗಳನ್ನು ಮಸೀದಿಯ ಗೋಡೆಗಳಾಗಿ ಪರಿವರ್ತಿಸಿ, ಬಾಬರಿ ಮಸೀದಿ ನಿರ್ಮಿಸಿದ್ದು ರಾಷ್ಟ್ರ ಕಂಡ ಭಯಾನಕ ಸತ್ಯ. ಭರತವರ್ಷದ ಆತ್ಮದಂತಿದ್ದ ರಾಮಮಂದಿರದ ಧ್ವಂಸ ಮುಸ್ಲಿಂ ಲೂಟಿಕೋರರ ದುರಾಚಾರಕ್ಕೆ ಬಲಿಯಾದದ್ದು ದುರ್ದೈವವೇ ಸರಿ. ಹೀಗೆ ಹಿಂದೂ ಶ್ರದ್ಧಾಕೇಂದ್ರ ಶೋಚನೀಯ ಪರಿಸ್ಥಿತಿಗೆ ನೂಕಲ್ಪಟ್ಟಿತು. ಈ ಕಾರಣದಿಂದಲೇ ಅಯೋಧ್ಯೆ ರಾಮಜನ್ಮಭೂಮಿ ವಿವಾದ ಹುಟ್ಟಿಕೊಂಡಿತು. ಸರಿಸುಮಾರು ನಾಲ್ಕುವರೆ ಶತಮಾನಗಳ ನಿಲ್ಲದ ಸಂಘರ್ಷ ಯುದ್ಧಗಳಲ್ಲಿ ಪರಿಸಮಾಪ್ತಿ ಆಯಿತೇ ಹೊರತು ವಿವಾದ ಮಾತ್ರ ಬಗೆಹರಿಯಲಿಲ್ಲ.

ಭಾರತದ ಸ್ವಾತಂತ್ರ್ಯ ನಂತರದ ಇತಿಹಾಸವನ್ನು ಅವಲೋಕಿಸಿದಾಗ ಅನೇಕ ಘಟನೆಗಳ ನೆನಪು ಮರುಕಳಿಸುತ್ತದೆ. 1949ರಲ್ಲಿ ವಿವಾದಿತ ಕಟ್ಟಡದ ಒಳಗೆ ರಾಮವಿಗ್ರಹದ ಪ್ರತಿಷ್ಠಾಪನೆ ನಡೆದಿತ್ತು ಹಾಗೂ ವಿವಾದ ಕೋರ್ಟ್ ಮೆಟ್ಟಿಲೇರಿತ್ತು. 1950ರಲ್ಲಿ ಗೋಪಾಲ್ ಸಿಂಗ್ ವಿಶಾರದ ಮತ್ತು ಮಹಾಂತ ಪರಮಹಂಸ ರಾಮಚಂದ್ರ ದಾಸ್‌ರವರು ರಾಮನ ವಿಗ್ರಹಕ್ಕೆ ಪೂಜೆಸಲ್ಲಿಸಲು ಅವಕಾಶ ನೀಡಬೇಕೆಂದು ಅರ್ಜಿಯನ್ನು ಕೋರ್ಟಿಗೆ ಸಲ್ಲಿಸಿದ್ದರು. 1959ರಲ್ಲಿ ನಿರ್ಮೋಹಿ ಅಖಾಡದವರು ಕೋರ್ಟ್‌ಗೆ ಅರ್ಜಿಸಲ್ಲಿಸಿ ನಮ್ಮನ್ನು ರಾಮಜನ್ಮಭೂಮಿಯ ಪೋಷಕರೆಂದು ಗುರುತಿಸಬೇಕೆಂದು ಕೇಳಿಕೊಂಡಿದ್ದರು. 1984ರಲ್ಲಿ ಹಿಂದೂ ಸಂಘಟನೆಗಳ ನೇತೃತ್ವದಲ್ಲಿ ರಾಮಮಂದಿರದ ನಿರ್ಮಾಣಕ್ಕೆ ಚಳುವಳಿ ನಡೆದು ಅದರ ನೇತೃತ್ವವನ್ನು ಎಲ್.ಕೆ. ಅಡ್ವಾಣಿಯವರು ವಹಿಸಿದ್ದರು. ತದನಂತರ 1990ರಲ್ಲಿ ರಥಯಾತ್ರೆ ನಡೆಯಿತು. 1992ರಲ್ಲಿ ಕರಸೇವಕರು ಬಾಬರಿ ಮಸೀದಿಯನ್ನು ನೆಲಸಮಗೊಳಿಸಿ ಹಿಂದೂ ಶ್ರದ್ಧಾಕೇಂದ್ರವನ್ನು ಮುಕ್ತಗೊಳಿಸಿದರು. ತತ್ಪರಿಣಾಮ ನ್ಯಾಯಮೂರ್ತಿ ಎಂ.ಎಸ್ ಲಿಬರ್ಹಾನ್ ನೇತೃತ್ವದಲ್ಲಿ ತನಿಖಾ ಸಮಿತಿ ರಚಿಸಲಾಯಿತು. ತನಿಖೆಯ ವೇಳೆ ಭಾರತೀಯ ಪುರಾತತ್ವ ಇಲಾಖೆ ಸತತ ಅಧ್ಯಯನ ನಡೆಸಿ, ಉತ್ಖನನ ಕೈಗೊಂಡು ಹಲವು ಮಹತ್ವದ ಪುರಾವೆಗಳನ್ನು ಪತ್ತೆ ಹಚ್ಚಿತು. ಇದೆಲ್ಲದರ ಆಧಾರದ ಮೇಲೆ ಭಾರತದ ಸರ್ವೋಚ್ಚ ನ್ಯಾಯಾಲಯ ಮಹತ್ವದ ತೀರ್ಪನ್ನು ಪ್ರಕಟಿಸುವುದರ ಮೂಲಕ ಎರಡು ದಶಕಗಳಿಗೂ ಅಧಿಕದ ತಕರಾರಿಗೆ ಮುಕ್ತಿನೀಡಿ ಹಿಂದೂಗಳ ಶ್ರದ್ಧಾಕೇಂದ್ರದ ಪಾವಿತ್ರ್ಯತೆಯನ್ನು ಎತ್ತಿಹಿಡಿಯಿತು.

ಇತ್ತೀಚೆಗೆ ರಾಮಭಕ್ತ ಭಾರತದ ಆದರಣೀಯ ಪ್ರಧಾನಮಂತ್ರಿ ರಾಮಮಂದಿರ ನಿರ್ಮಾಣದ ಅಡಿಗಲ್ಲು ಶಂಕುಸ್ಥಾಪನೆ ನೆರವೇರಿಸಿದ್ದು ಎಲ್ಲಾ ಭಾರತೀಯರ ರಾಮಭಾವ ಚೇತನ ಜಾಗರಣಕ್ಕೆ ಮೇಲ್ಪಂಕ್ತಿ ಹಾಕಿಕೊಟ್ಟಿದೆ.

ಜನ್ಮ ನೀಡಿದ ತಾಯಿ, ನಮ್ಮನ್ನು ಪೋಷಿಸುವ ಮಾತೃಭೂಮಿ ಸ್ವರ್ಗಕ್ಕಿಂತಲೂ ಮಿಗಿಲು ಎಂಬ ಉದಾತ್ತ ಚಿಂತನೆ ಹೊಂದಿದ್ದ ಪ್ರಭು ಶ್ರೀರಾಮಚಂದ್ರನ ಅಯೋಧ್ಯೆಯಲ್ಲಿ ನಿರ್ಮಾಣವಾಗುವ ಬೃಹತ್ ರಾಮಮಂದಿರಕ್ಕೆ ಕಾಯ, ವಾಚಾ, ಮನಸಾ ಸಮರ್ಪಣಾ ಭಾವದಿಂದ ನಿಧಿ ಸಂಗ್ರಹಣೆಯ ಸಂಕಲ್ಪವನ್ನು ಸಂಪನ್ನಗೊಳಿಸೋಣ.

ಜೈಹಿಂದ್... ಜೈ ಶ್ರೀರಾಮ್

●

## ಶಿಕ್ಷಕ ಸ್ತಂಭ

# ನಾವೂ ಹೀಗಾಗಬಹುದೇ?




**ನಂ. ನಾಗಲಕ್ಷ್ಮಿ**
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಬೆಂಗಳೂರು


ನಮ್ಮ ಪರಂಪರೆ, ನಮ್ಮ ಸಂಸ್ಕೃತಿ ಎಂದರೆ ಗೌರವ, ಶ್ರದ್ಧೆ ಇರಬೇಕಾದುದು ಅವಶ್ಯ. ಅವುಗಳ ಬಗ್ಗೆ ಎಂದಿಗೂ ಕೀಳು ಭಾವನೆಯಾಗಲಿ, ಉದಾಸೀನವಾಗಲಿ ಎಂದಿಗೂ ಇರಬಾರದು. ಅವುಗಳನ್ನು ಕಾಪಾಡಿಕೊಳ್ಳಬೇಕಾದುದು ನಮ್ಮ ಕರ್ತವ್ಯವೇ ಆಗಿರುತ್ತದೆ. ಇದನ್ನು ಕೆಳಗಿನ ಒಂದು ಉದಾಹರಣೆಯೊಂದಿಗೆ ಸ್ಪಷ್ಟಪಡಿಸಬಹುದು, ಜೊತೆಗೆ ಪ್ರತಿಯೊಬ್ಬರೂ ಆತ್ಮಾಭಿಮಾನ ಹೊಂದಿರುವುದೂ ಅಷ್ಟೇ ಅಗತ್ಯ.



ವಿಶ್ವೇಶ್ವರಯ್ಯನವರು ದಿವಾನರಾದ ಮೇಲೆ ನವರಾತ್ರಿಯ ಹತ್ತು ದಿನಗಳೂ ಮೈಸೂರಿನಲ್ಲೇ ಬಿಡಾರ ಮಾಡುತ್ತಿದ್ದರು. ಉತ್ಸವದ ಘನತೆ, ಗಾಂಭೀರ್ಯಗಳ ಮೇಲೆ ನಗಾ ಇಡುತ್ತಿದ್ದರು. ಅದೊಂದು ದಿನ ದರ್ಬಾರ್ ಭಕ್ಷಿ ದಿವಾನರನ್ನು ಕಂಡು "ನಾಳೆಯ ದಿನ ಯುರೋಪಿಯನ್ ದರ್ಬಾರ್ ಇದು; ಎರಡು ನೂರು ಕುರ್ಚಿಗಳು ಬೇಕಾಗುತ್ತವೆ" ಎಂದು ವಿನಂತಿಸಿದರು. ವಿಶ್ವೇಶ್ವರಯ್ಯನವರು "ಈ ಎಂಟೂ ದಿನಗಳು ಇಲ್ಲದ ಈ ಕುರ್ಚಿಗಳ ಅಗತ್ಯ ಈಗೇಕೆ?" ಎಂದು ಅವರನ್ನು ಕೇಳಿದರು. ಅದಕ್ಕೆ ಭಕ್ಷಿಗಳು "ಇದು ಹಿಂದಿನಿಂದ ನಡೆದು ಬಂದ ಪದ್ಧತಿ. ಯುರೋಪಿಯನ್ ಅಧಿಕಾರಿಗಳು ನಮ್ಮವರಂತೆ ಕೆಳಗೆ ಕುಳಿತುಕೊಳ್ಳುವುದಿಲ್ಲ. ಅವರೆಲ್ಲ ವಿಶೇಷ ಆಹ್ವಾನಿತರು, ಅವರಿಗೆ ಕುರ್ಚಿಗಳು ಬೇಕೇಬೇಕು" ಎಂದು ಸಂದರ್ಭ ತಿಳಿಸಿದರು. ಆಗ ದಿವಾನರು, "ಈಗಾಗಲೇ ರತ್ನಗಂಬಳಿಗಳನ್ನು ಹಾಸಿದೆಯಲ್ಲ; ಈ ಕುರ್ಚಿಗಳನ್ನು ಎಲ್ಲಿ ಹಾಕುತ್ತೀರಿ?" ಎಂದು ಕೇಳಿದರು. "ಕೆಲವು ರತ್ನಗಂಬಳಿಗಳನ್ನು ತೆಗೆದು ಹಿಂದೆ ಹಾಕುತ್ತೇವೆ; ಮುಂದಿನ ಸಾಲಿನಲ್ಲಿ ಕುರ್ಚಿಗಳನ್ನು ಜೋಡಿಸುತ್ತೇವೆ" ಎಂದರು, ಭಕ್ಷಿಯವರು. "ಸರಿ, ನೀವು ಹೋಗಿ" ಎಂದು ಅವರನ್ನು ಕಳುಹಿಸಿ, ವಿಶ್ವೇಶ್ವರಯ್ಯನವರು ನೇರವಾಗಿ ಅರಮನೆಗೆ ಹೋದರು.

ವಿಶ್ವೇಶ್ವರಯ್ಯನವರು ಈ ವಿಚಾರವನ್ನು ಮಹಾರಾಜರೊಂದಿಗೆ ಚರ್ಚಿಸಿದರು. ಅವರ ವಾದಸರಣಿ ಇದು "ನಮ್ಮ ನಾಡಿನ ಮುಖ್ಯ ಆಧಾರಸ್ತಂಭಗಳನ್ನು ಹಿಂದೆ ಕೂರಿಸಿ, ವಿದೇಶೀಯರು ಎಂಬ ಒಂದೇ ಕಾರಣಕ್ಕೇ ಅವರನ್ನು ಮುಂದೆ ಎತ್ತರದ ಆಸನಗಳಲ್ಲಿ ಕೂರಿಸುವುದೇ? ನಾವು ಆಹ್ವಾನಿಸಿರುವುದು ಕೇವಲ 25 ಮಂದಿಯನ್ನು. ಆದರೆ ಬರುವವರು 200 ಮಂದಿ. ಆಹ್ವಾನಿತರ ಜೊತೆಯಲ್ಲಿ ಅವರ ಹೆಂಡತಿ, ಮಕ್ಕಳು, ಅಳಿಯಂದಿರು, ಬಟ್ಲರುಗಳು, ಪರಿಚಾರಕರು, ಕಾರ್ಯದರ್ಶಿಗಳು, ಡ್ರೈವರುಗಳು ಇವರೆಲ್ಲ ಇದರಲ್ಲಿ ಸೇರಿರುತ್ತಾರೆ. ಇವರೆಲ್ಲರೂ ನಮ್ಮ ನಾಡಿನ ಹೊಣೆ ಹೊತ್ತಿರುವ ಸಾರ್ವಜನಿಕ ಮುಖಂಡರಿಗಿಂತ ದೊಡ್ಡವರೆಂದು ಭಾವಿಸಬೇಕು. ಇದರಿಂದ ನಮ್ಮ ಪರಂಪರೆ, ನಮ್ಮ ಸಂಸ್ಕೃತಿ ಎಂಬ ಗೌರವ ಭಾವನೆಯಿಂದ ಬಂದ ಶ್ರದ್ಧಾವಂತರನ್ನು ಕಡೆಗಣಿಸಿದಂತಾಗುವುದಿಲ್ಲವೇ?"

ಈ ವಾದವನ್ನು ಕೇಳಿದ ಮೇಲೆಯೂ ದೊರೆಗಳು ಹೇಳಿದ್ದು: "ಇದು ಹಿಂದಿನಿಂದ ನಡೆದುಬಂದ ಪದ್ಧತಿ. ಅವರಿಗೆ ಆಸನಗಳನ್ನು ಒದಗಿಸಬೇಕು. ಇಲ್ಲದಿದ್ದರೆ ಅವರ ಅಸಮಾಧಾನಕ್ಕೆ ನಾವು ಪಾತ್ರರಾಗುತ್ತೇವೆ."

ವಿಶ್ವೇಶ್ವರಯ್ಯನವರು "ಸರಿ, ಅವರಿಗೆ ಆಸನಗಳನ್ನು ಒದಗಿಸಬೇಕೆಂಬ ಪ್ರಭುಗಳ ಅಭಿಪ್ರಾಯಕ್ಕೆ ನಾನು ಪ್ರತಿ ಹೇಳಲಾರೆ" ಎಂದು ಹೇಳಿ ಹೊರಟುಬಂದುಬಿಟ್ಟರು. ಕೂಡಲೇ ಸಭಾಭವನದಲ್ಲಿ ಆಗಲೇ ಹಾಸಿದ್ದ ರತ್ನಗಂಬಳಿಗಳ ಮೇಲೆ ಒಂದು ಸಾವಿರ ಕುರ್ಚಿಗಳನ್ನು ಜೋಡಿಸುವಂತೆ ಆದೇಶ ಕೊಟ್ಟರು. ಪಕ್ಕದ ಒಂದು ಸಾಲಿನಲ್ಲಿ ಯುರೋಪಿಯನ್ನರಿಗೆ ಎಂದು ಪ್ರತ್ಯೇಕವಾಗಿ ಕುರ್ಚಿಗಳು ಮೀಸಲಾದುವು. ಸಾಯಂಕಾಲ ದರ್ಬಾರಿಗೆ ಬಂದ ಎಲ್ಲರಿಗೂ ಸ್ವದೇಶಿ ವಿದೇಶಿ ಎನ್ನದೆ ಸಮಾನವಾಗಿ ಆಸನಗಳು ಸಿದ್ಧವಾದುವು.

ಈ ಏರ್ಪಾಡು ಮಹಾರಾಜರಿಗೂ ಮೆಚ್ಚುಗೆಯಾಯಿತು. ವಿಶ್ವೇಶ್ವರಯ್ಯನವರ ಬುದ್ಧಿಚಾತುರ್ಯಕ್ಕೆ ಮೆಚ್ಚಿ ತಮ್ಮ ಕೈಯಲ್ಲಿದ್ದ ಪಚ್ಚೆಯುಂಗುರವನ್ನು ಪ್ರೀತಿ ಗೌರವಗಳ ಸಂಕೇತವಾಗಿ ಅವರಿಗೆ ನೀಡಿದರು.

ವಿಜಯದಶಮಿಯ ಹಿಂದಿನ ದಿನದಂದು ಯುರೋಪಿಯನ್ ದರ್ಬಾರು ನಡೆಯುತ್ತಿದ್ದ ರೀತಿಯನ್ನು ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಬೆಳಗೆರೆ ಶಾಸ್ತ್ರಿಗಳಿಗೆ ವಿವರಿಸುತ್ತ ಸರ್. ಎಂ. ವಿಶ್ವೇಶ್ವರಯ್ಯನವರು ನಮ್ಮ ಪರಂಪರೆ, ನಮ್ಮ ಸಂಸ್ಕೃತಿಯನ್ನು ಗೌರವಿಸುವುದರ ಜೊತೆಗೆ ಸ್ವಾಭಿಮಾನವನ್ನು ಕಾಯ್ದುಕೊಳ್ಳುವುದನ್ನು ತಮ್ಮ ನಡೆನುಡಿಯ ಮೂಲಕ ತಿಳಿಸುತ್ತಿದ್ದ ಬಗೆಯನ್ನು ವಿವರಿಸಿದ್ದರು.

ಎಂತಹ ಸಂದರ್ಭದಲ್ಲಿಯೂ ನಮ್ಮ ಆತ್ಮಗೌರವಕ್ಕೆ ಕುಂದು ಬರದಂತೆ ನೋಡಿಕೊಳ್ಳುವ ಸ್ವಾಭಿಮಾನ ಕಾಳಜಿ ಪ್ರತಿಯೊಬ್ಬರಲ್ಲಿಯೂ ಇರಬೇಕಲ್ಲವೇ?

ಕೃತಜ್ಞತೆಯೊಂದಿಗೆ
ಆಕರ: ಉದಾರಚರಿತರು – ಉದಾತ್ತ ಪ್ರಸಂಗಗಳು– ಲೇ: ಡಾ॥ ಟಿ. ವಿ. ವೆಂಕಟಾಚಲಶಾಸ್ತ್ರಿ

ಶ್ರದ್ಧೆಯೆಂಬುದು ಕೊನೆಯ ಮಾತು. ಶ್ರದ್ಧೆಯಿದ್ದರೆ ನಿಜವಾಗಿಯೂ ಗುರಿ ತಲುಪಿದಂತೆ.

# ಸಂಕಲ್ಪದಿನ – ವಿವೇಕಾನಂದರ ಜನ್ಮದಿನ

**ಶ್ರೀ ಕೆ. ಬಾಲಕೃಷ್ಣ ಭಟ್**
**Ex. MLC**
**ದಕ್ಷಿಣ ಕ್ಷೇತ್ರೀಯ ಪ್ರಮುಖ್, ಎಬಿಆರ್‌ಎಸ್‌ಎಂ**

ಶಿಕ್ಷಣ ಕ್ಷೇತ್ರದ ಅದ್ವಿತೀಯ ಸಂಘಟನೆಯಾಗಿರುವ ಅಖಿಲ ಭಾರತೀಯ ಶೈಕ್ಷಿಕ ಮಹಾಸಂಘವು ಪ್ರತಿವರ್ಷ ತಪ್ಪದೇ ಆಚರಿಸುವ ಒಂದು ಪ್ರಮುಖ ಕಾರ್ಯಕ್ರಮವೆಂದರೆ ಸ್ವಾಮಿ ವಿವೇಕಾಂದರ ಜನ್ಮದಿನ. ಪ್ರತಿವರ್ಷದ ಜನವರಿ 12 ರಂದು ಶೈಕ್ಷಿಕ ಮಹಾಸಂಘವು ಈ ದಿನವನ್ನು 'ಸಂಕಲ್ಪದಿನ'ವೆಂಬ ಹೆಸರಿನಲ್ಲಿ ಆಚರಿಸುವಂತೆ ತನ್ನೆಲ್ಲ ಘಟಕಗಳಿಗೆ ಸೂಚಿಸುತ್ತದೆ. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕಸಂಘವು ಎಬಿಆರ್‌ಎಸ್‌ಎಂಗೆ ಸಂಲಗ್ನಗೊಂಡಿದ್ದು ಈ ಕಾರ್ಯಕ್ರಮವನ್ನು ನಾವು ಅತ್ಯಂತ ಶ್ರದ್ಧೆಯಿಂದ ನಡೆಸಬೇಕೆಂದು ಅಪೇಕ್ಷಿಸುತ್ತದೆ.



ಜನವರಿ 12 ಸ್ವಾಮೀಜಿಯವರ ಹುಟ್ಟಿದ ದಿನವಾದರೆ, ಜನವರಿ 23 ನೇತಾಜಿ ಸುಭಾಷ್ ಚಂದ್ರ ಬೋಸರ ಜನ್ಮದಿನವೆಂದು ಶಿಕ್ಷಕರಿಗಂತೂ ತಿಳಿದಿರಲೇಬೇಕು. ಶಿಕ್ಷಕರು ತಾವು ತಿಳಿದುಕೊಂಡಾಗ ಮಾತ್ರ ಅವರ ಬಗ್ಗೆ ಮಕ್ಕಳಿಗೂ, ಸಮಾಜಕ್ಕೂ, ಹೇಳುವುದಕ್ಕೆ ಸಾಧ್ಯ. ಈ ಎರಡು ಮಹಾನುಭಾವರು ವಿದ್ಯಾರ್ಥಿಗಳಿಗೆ ಹಾಗೂ ಯುವಕರಿಗೆ ಎಂದೆಂದೂ ಪ್ರೇರಣೆಯ ಸ್ತೋತ್ರವಾದ ಕಾರಣ ಅದಕ್ಕೆ ಇನ್ನಷ್ಟು ಪ್ರಾಧಾನ್ಯತೆ.

ಜನವರಿ 12 ರಂದೇ ಶಿಕ್ಷಕರು ತಮ್ಮ ಶಾಲೆಗಳಲ್ಲೋ ಅಥವಾ ಎಲ್ಲರಿಗೂ ಅನುಕೂಲದ ಒಂದು ಸ್ಥಳದಲ್ಲೋ ಒಟ್ಟು ಸೇರಿ ಈ ದಿನದ ಮಹತ್ವವನ್ನು, ಸ್ವಾಮೀಜಿಯವರ ಜೀವನವನ್ನು, ಅವರ ಕಂಚಿನ ವಾಣಿಯನ್ನು ಕೇಳುವುದಲ್ಲದೆ ಇತರರಿಗೂ ಹೇಳಬೇಕು. ಶಿಕ್ಷಕ ತನ್ನನ್ನು ತಾನು ಶಿಕ್ಷಣ ವೃತ್ತಿಗೆ ಮತ್ತೊಮ್ಮೆ ಸಮರ್ಪಿಸಿಕೊಳ್ಳುತ್ತೇನೆಂದು ಪ್ರತಿಜ್ಞೆ ಮಾಡುವ ದಿನವಿದು.

ನಮ್ಮ ಬದುಕಿನಲ್ಲಿ ಹಣ, ಸ್ಥಾನ, ಗೌರವ, ಮನ್ನಣೆ ಇವೆಲ್ಲವೂ ದೊರೆಯಬೇಕೆಂದು ಬಯಸುವುದು ಸಹಜ. ಆದರೆ ಇವು ಮಾತ್ರ ನಮ್ಮ ಜೀವನದ ಪರಮಗುರಿಯಾಗಿರುವುದು ಸಲ್ಲದು. ಅವೆಲ್ಲವೂ ದೊರಕಿದ ಬಳಿಕ ಇನ್ನೇನೇನೋಬೇಕೆಂದು ಮನಸ್ಸು ಹಪಹಪಿಸಬಹುದು. ಆದರೆ ಯಾವುದನ್ನು ಪಡೆಯುವುದರಿಂದ ಜೀವನದ ಲಕ್ಷ್ಯ ಪೂರ್ತಿಯಾಗುವುದೋ ಅಂತಹ ಜ್ಞಾನಗಳಿಸುವುದು ಮತ್ತು ಅದನ್ನು ಲೋಕಹಿತಕ್ಕಾಗಿ ಬಳಸುವುದು– ಇದು ನಮ್ಮ ಗುರಿಯಾಗಿರಬೇಕು ಎಂದು ತಾವು ಮತ್ತೆ ಮತ್ತೆ ದೃಢೀಕರಿಸಿಕೊಳ್ಳುತ್ತ ಅದರಂತೆ ಶಿಕ್ಷಕ ಬದುಕಿದಾಗ ಮಾತ್ರ ವಿದ್ಯಾರ್ಥಿಗಳ ಗೌರವಕ್ಕೆ ನಾವು ಪಾತ್ರರಾದೇವು. ಬದಲಾಗಿ ಈ ಶಿಕ್ಷಕವೃತ್ತಿ ಜೀವನೋಪಾಯಕ್ಕೆ ಇರುವ ಒಂದು ಉದ್ಯೋಗ ಮಾತ್ರ ಎಂದು ಭಾವಿಸಿದರೆ ನಾವು ಆ ಗುರು ಪರಂಪರೆಗೆ ಎಸಗುವ ಅಪಚಾರವಾದೇವು. ಆಗ ನಮ್ಮನ್ನು ಸಮಾಜ ಕ್ಷಮಿಸದು.

ಇಡೀ ಸಮಾಜದ ವಿವಿಧ ವರ್ಗಗಳು ತಮ್ಮ ತನವನ್ನು ಕಳೆದುಕೊಂಡರೂ ಸಹ ಶಿಕ್ಷಕ ತಮ್ಮ ಕರ್ತವ್ಯದಿಂದ ವಿಮುಖನಾಗುವುದು ಸಲ್ಲದು. ಶಿಕ್ಷಕ ವೃತ್ತಿಗೆ ಒಮ್ಮೆ ಸೇರಿಕೊಂಡ ಮೇಲೆ ಆ ವೃತ್ತಿಯ ಪಾವಿತ್ರ್ಯ ರಕ್ಷಣೆ ನಮ್ಮ ಹೊಣೆ. ಕೊನೆಗೆ ನಾವು ವೃತ್ತಿಯಲ್ಲಿರಲಿ, ನಿವೃತ್ತಿಯಾಗಲೀ ನಮ್ಮ ಮತ್ತು ನಮ್ಮ ವಿದ್ಯಾರ್ಥಿಗಳ ಸಂಬಂಧ ಅದು ಪರಮ ಪವಿತ್ರ, ಶಾಶ್ವತವಾಗಿರತಕ್ಕಂಥದ್ದು. ಸಚ್ಚಾರಿತ್ರ್ಯವುಳ್ಳ ಸೃಜನಶೀಲ, ಕರ್ತೃತ್ವಶಕ್ತಿಯಿಂದ ಪುಟಿದೇಳುವ ಯುವಜನಾಂಗದ ಸೃಷ್ಟಿಯೇ ಒಬ್ಬ ಶಿಕ್ಷಕನ ಜೀವನ ದೃಷ್ಟಿಯಾಗಬೇಕು. ಇದನ್ನೇ ಸ್ವಾಮೀ ವಿವೇಕಾನಂದರು ನಮ್ಮಿಂದ ಬಯಸಿರುವುದು. ಅದನ್ನು ಮತ್ತೆ ಮತ್ತೆ ನೆನಪಿಸುತ್ತ ಅದಕ್ಕಾಗಿ ಜೀವನ ಸಂಕಲ್ಪ ಕೈಗೊಳ್ಳೋಣ ಬನ್ನಿ, ಭಾಗವಹಿಸಿ.

•

# ವಿದ್ಯಾರ್ಥಿ ಜ್ಞಾನ ಮಿತ್ರ

# ಭಾರತ ಪರಿಚಯ


**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**




ಪರಿಸರಕ್ಕೂ, ಮಾನವನಿಗೂ ಗಾಢ ಸಂಬಂಧವಿದೆ. ಅವನು ಪರಿಸರದ ಮಡಿಲಲ್ಲಿ ಹುಟ್ಟುತ್ತಾನೆ. ಅಲ್ಲಿಯೇ ಬದುಕಿ ಬಾಳುತ್ತಾನೆ. ಅವನು ತನ್ನ ಬೇಕಾದ ಎಲ್ಲಾ ಅವಶ್ಯಕತೆಗಳನ್ನು ಪರಿಸರದಿಂದಲೇ ಪಡೆಯುತ್ತಾನೆ. ಮಾನವನಿಗೆ ನಿಸರ್ಗವು ಮಾತೆಯಿದ್ದಂತೆ. ಆದ್ದರಿಂದಲೇ ಅದನ್ನು ನಿಸರ್ಗ ಮಾತೆ ಎಂದು ಕರೆಯುತ್ತಾರೆ. ಆದರೆ ಮಹಾಸ್ವಾರ್ಥಿಯಾದ ಮಾನವ ಇಂದು ಪರಿಸರದ ಬಗ್ಗೆ ತುಂಬಾ ಉದಾಸೀನವಾಗಿದ್ದಾನೆ.

ತನಗೆ ತಿಳಿದೋ ತಿಳಿಯದೋ ಪರಿಸರದ ನಾಶಕ್ಕೆ ಮುಂದಾಗಿದ್ದಾನೆ. ಪರಿಸರ ನಾಶದಲ್ಲಿ ನನ್ನ ನಾಶವೂ ಇದೆ ಎಂಬುದನ್ನು ಮರೆತಿದ್ದಾನೆ. ಇದು ಅವನ ಮೌಢ್ಯತನವೇ ವಿನಃ ಜಾಣತನ ಖಂಡಿತ ಅಲ್ಲ. ಅವನ ಅವಿವೇಕ ಹಾಗೂ ಅಜಾಗರೂಕತೆಯಿಂದ ಪರಿಸರ ಕಲುಷಿತಗೊಳ್ಳುವುದರ ಜೊತೆಗೆ ಅಮಾಯಕ ಜನರ ದಿಢೀರ್ ಪ್ರಾಣಹಾನಿಗೂ ಕಾರಣವಾಗುತ್ತಿದೆ.

ಒಟ್ಟಿನಲ್ಲಿ ಹೇಳುವುದಾದರೆ ಇಂದಿನ ಮಕ್ಕಳೂ ಕೂಡ ಪರಿಸರದ ಸಂರಕ್ಷಕರಾಗಬೇಕು. ಚಿಕ್ಕ ಮಕ್ಕಳಿಂದ ಹಿಡಿದು ಹಿರಿಯರವರೆಗೂ ಎಲ್ಲರೂ ಪರಿಸರವನ್ನು ರಕ್ಷಿಸಬೇಕಾಗಿದೆ. ಪರಿಸರ ಸಂರಕ್ಷಣೆ ಮತ್ತು ಜಾಗೃತಿ ನಮ್ಮೆಲ್ಲರ ಕರ್ತವ್ಯವಾಗಿದೆ.

**ಈ ಪ್ರಶ್ನೆಗಳಿಗೆ ಉತ್ತರಗಳನ್ನು ಓದುಗರು kssta55@gmail.com ಮೂಲಕ ಕಳುಹಿಸುವುದು. ಸರಿಯಾದ ಉತ್ತರವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.**

## ಒಂದಿಷ್ಟು ಇತಿಹಾಸ

1. ಮಹಾಭಾರತದ ಯುಗ ಯಾವುದು?
2. ಬಾರ್ಡೋಲಿ ಸತ್ಯಾಗ್ರಹದ ನೇತಾರ ಯಾರು?
3. 'ದಕ್ಷಿಣಾಪರಮೇಶ್ವರ' ಎಂಬ ಬಿರುದು ಯಾರಿಗೆ ಬಂದಿದೆ?
4. ಅಮೋಘವರ್ಷ ನೃಪತುಂಗ ಯಾವ ರಾಜವಂಶಕ್ಕೆ ಸೇರಿದವನು?
5. ಕನ್ನಡದ ಮೊಟ್ಟ ಮೊದಲ ಶಾಸನ ಯಾವುದು?

## ಜ್ಞಾನ ವಿಜ್ಞಾನ

1. ಭಾರತದ ಹಸಿರು ಕ್ರಾಂತಿಯ ಹರಿಕಾರ ಎಂದು ಯಾರನ್ನು ಕರೆಯುವರು?
2. ಸುಡುವ ಅನಿಲ ಯಾವುದು?
3. ಸೋಡಾ ನೀರಿನಲ್ಲಿ ಯಾವ ಆಮ್ಲವಿದೆ?
4. ಮೋದೋಜೀರಕ ಗ್ರಂಥಿಯಿಂದ ಉತ್ಪತ್ತಿಯಾಗುವ ಹಾರ್ಮೋನ್ ಯಾವುದು?
5. ಮಾನವನಿಗೆ ತಿಳಿದಿರುವ ಪ್ರಪ್ರಥಮ ಚಿಕಿತ್ಸಾ ಪದ್ಧತಿ ಯಾವುದು? ಇದರ ಜನಕ ಯಾರು?

## ನವೆಂಬರ್ ಸಂಚಿಕೆಯ ಉತ್ತರಗಳು

**ಒಂದಿಷ್ಟು ಇತಿಹಾಸ – ಉತ್ತರಗಳು**

1. ಸುಮಾರು ಕ್ರಿ.ಪೂರ್ವ 5 ಸಾವಿರ ವರ್ಷ
2. ಆಚಾರ್ಯ ಚಾಣಕ್ಯ
3. ಮಾನ್ಯಖೇಟ ಅಥವಾ ಮಾಲ್‌ಖೇಡ್ (ಕರ್ನಾಟಕ)
4. ಬಿಜಾಪುರ, ಬೀದರ್, ಅಹಮದ್‌ನಗರ ಹಾಗೂ ಗೊಲ್ಕಂಡದ ಸುಲ್ತಾನರ ಸಂಘಟಿತ ಸೈನ್ಯ ಮತ್ತು ವಿಜಯನಗರದ ಅರಸರ ನಡುವೆ 1565ರಲ್ಲಿ ನಡೆದ ಯುದ್ಧದ ಸ್ಥಳ
5. ಕೆಂಗಲ್ ಹನುಮಂತಯ್ಯನವರು

**ಜ್ಞಾನ–ವಿಜ್ಞಾನ – ಉತ್ತರಗಳು**

1. 5 ಜನ ಭಾರತೀಯಕಾರರು
2. ರವೀಂದ್ರನಾಥ ಠಾಗೋರ್ 1913
   ಸಿ.ವಿ ರಾಮನ್–1930
3. ಅಮಾರ್ತ್ಯ ಸೇನ್ 1998
4. ರಾಜೇಂದ್ರ, ಕೆ ಪಚಾರಿ 2007
5. ಕೈಲಾಸ ಸತ್ಯಾರ್ಥಿ 2014

# ಶಿಕ್ಷಕನೆಂಬ ನಾಯಕ



**ಲಕ್ಷ್ಮೀಸಿಂಗ್ ಬಿ.**
**ಶೈಕ್ಷಣಿಕ ಸಮಾಲೋಚಕರು**
**ಲೈಫ್ ಕೋಚ್**
**ಲಕ್ಷ್ಮೀ ಕೋಚಿಂಗ್ ಸೆಂಟರ್**

ನಾಯಕನೆಂದರೆ ಒಂದು ಗುಂಪಿನ ಅಥವಾ ಒಂದು ಸಮೂಹದ ನಾಯಕನೆಂದೇ ಅರ್ಥವಲ್ಲ. ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತ ತನ್ನ ಯೋಚನೆ, ಯೋಜನೆಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡು ಅವರ ಪ್ರಗತಿಗೆ ಕಾರಣಕರ್ತನಾಗುವ ಶಿಕ್ಷಕ ಕೂಡ ಒಬ್ಬ ನಿಜವಾದ ನಾಯಕನೇ...

ಶಿಕ್ಷಕರಲ್ಲಿ ನಾಯಕತ್ವದ ಗುಣಲಕ್ಷಣಗಳು ಖಂಡಿತವಾಗಿಯೂ ಇರಲೇಬೇಕು ಮತ್ತು ಮುಂದಾಳತ್ವದ ಗುಣಗಳಿದ್ದರೇನೇ ಅವರು ತಮ್ಮ ವಿದ್ಯಾರ್ಥಿಗಳಿಗೆ ಸರಿಯಾದ ಮಾರ್ಗದರ್ಶನ ನೀಡಿ ಅವರನ್ನು ಉತ್ತೇಜಿಸಿ ಎಲ್ಲಾ ಕ್ಷೇತ್ರಗಳಲ್ಲಿ ಮುನ್ನಡೆಯುವಂತೆ ಮಾಡಲು ಸಾಧ್ಯವಾಗುವುದು. ಗಯಟೆ ಹೇಳಿರುವಂತೆ "ನೀವು ಒಬ್ಬ ವಿದ್ಯಾರ್ಥಿಯನ್ನು ವಿದ್ಯಾರ್ಥಿಯಂತೆಯೇ ಪರಿಗಣಿಸಿದರೆ, ಅವನು ವಿದ್ಯಾರ್ಥಿಯಾಗಿಯೇ ಉಳಿದು ಹೋಗುತ್ತಾನೆ. ಆದರೆ ಅವನು ಮೇಧಾವಿಯಾಗಬೇಕೆಂಬ ದೃಷ್ಟಿಯಿಂದ ಪ್ರಯತ್ನಿಸಲಾರಂಭಿಸಿದರೆ ಅವನು ಮೇಧಾವಿಗಳಿಗೆ ಮೇಧಾವಿಯಾಗಬಲ್ಲ" ಈ ಮಾತಿನ ಅರ್ಥದಂತೆ ಶಿಕ್ಷಕರೇ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಕಾರಣರಾಗುತ್ತಾರೆ ಮತ್ತು ಅವರ ಏಳಿಗೆಗೆ ಮುಖ್ಯವಾದ ನಾಂದಿಯಾಗುತ್ತಾರೆ.

ನನ್ನ ಅಭಿಪ್ರಾಯದಂತೆ ಶಿಕ್ಷಕರಲ್ಲಿ ಇರಲೇಬೇಕಾದ ಕೆಲವು ಮುಖ್ಯ ನಾಯಕತ್ವದ ಲಕ್ಷಣಗಳು ಹೀಗಿವೆ:-

1. ಮೊದಲಿಗೆ ಶಿಕ್ಷಕರಾದವರು ವಿದ್ಯಾರ್ಥಿಗಳ ಪ್ರಗತಿಗಾಗಿ ತಮ್ಮ ಕೆಲವೊಂದು ರೀತಿ-ನೀತಿಗಳನ್ನು ಬದಲಾಯಿಸಿಕೊಳ್ಳಬೇಕು.
2. ವಿದ್ಯಾರ್ಥಿಗಳಲ್ಲಿ ಬದಲಾಗಬೇಕೆಂಬ ಒತ್ತಡ ತರದೇ, ಅವರೊಂದಿಗೆ ಕುಳಿತು ಅವರಲ್ಲಿಯ ಕುಂದು ಕೊರತೆಗಳನ್ನು ಸರಿಪಡಿಸುವುದರತ್ತ ಮಾರ್ಗದರ್ಶನವನ್ನು ನೀಡಬೇಕು.
3. ತಮ್ಮೆಲ್ಲಾ ವಿದ್ಯಾರ್ಥಿಗಳ ಹೆಸರನ್ನು ನೆನಪಿಟ್ಟುಕೊಳ್ಳುವುದು ಮತ್ತು ಸಾಧ್ಯವಾದಷ್ಟು ಅವರೆಲ್ಲರ ಹಿನ್ನೆಲೆ ತಿಳಿದುಕೊಳ್ಳುವುದು ಅತ್ಯವಶ್ಯಕ. ವಿದ್ಯಾರ್ಥಿಗಳೊಂದಿಗೆ ಕೆಲವೊಮ್ಮೆ ಅಗತ್ಯವಿರಲಿ ಇಲ್ಲದಿರಲಿ ಅವರ ನೇರ ಸಂಪರ್ಕದಲ್ಲಿರುವುದು ಒಳ್ಳೆಯದು.
4. ಶಿಕ್ಷಕರೆಂದರೆ ವಿದ್ಯಾರ್ಥಿಗಳಲ್ಲಿ ಕೇವಲ ಭಯ-ಭಕ್ತಿ ಮಾತ್ರವಿರದೇ ಸ್ನೇಹ, ವಿಶ್ವಾಸ ಮತ್ತು ಪ್ರೀತಿ ಇರುವಂತೆ ನೋಡಿಕೊಳ್ಳಬೇಕು.
5. ವಿದ್ಯಾರ್ಥಿಗಳ ದಿನನಿತ್ಯದ ಚಟುವಟಿಕೆಗಳ ಮೇಲೆ ನಿಗಾ ಇಟ್ಟು, ಕೆಲವೊಮ್ಮೆ ಮಕ್ಕಳೊಡನೆ ಮಕ್ಕಳಾಗಿ ಇದ್ದು ಅವರ ಮನಸ್ಸನ್ನು ಅರಿಯಲು ಪ್ರಯತ್ನಪಡಬೇಕು.
6. ವಿದ್ಯಾರ್ಥಿಗಳ ಒಳ್ಳೆಯ ಕೆಲಸವನ್ನು ಎಲ್ಲರೆದುರು ಹೊಗಳಬೇಕು, ಪ್ರೋತ್ಸಾಹ, ಪ್ರೀತಿ ತೋರಿ ಅವರ ಏಳಿಗೆಯಲ್ಲಿ ಸಹಕಾರ ನೀಡುವುದು ಬಹುಮುಖ್ಯ.
7. ಬದಲಾಗುತ್ತಿರುವ ಪರಿಸ್ಥಿತಿಗನುಗುಣವಾಗಿ ತಾನು ಕೂಡ ಹೊಸ ಹೊಸ ವಿಚಾರ, ಪದ್ಧತಿಗಳನ್ನು ಅಳವಡಿಸಿಕೊಂಡು ವಿದ್ಯಾರ್ಥಿಗಳ ಸಾಧನೆಯಲ್ಲಿ ಜೊತೆಗೂಡಬೇಕು. ಆಲೋಚನೆಗಳನ್ನು ಬದಲಾಯಿಸಿದರೆ, ಬದಲಾವಣೆ ಸಾಧ್ಯ.
8. ವಿದ್ಯಾರ್ಥಿಗಳನ್ನು ಎಲ್ಲರ ಮುಂದೆ ಅವರ ಲೋಪದೋಷಗಳ ಅವಹೇಳನ ಮಾಡದೇ ಪ್ರತ್ಯೇಕವಾಗಿ ಕರೆದು ವಿಚಾರಿಸಬೇಕು.
9. ವಿದ್ಯಾರ್ಥಿಗಳನ್ನು ಯಾವತ್ತಿಗೂ ಪರಸ್ಪರ ನಕಾರಾತ್ಮಕವಾಗಿ ಹೋಲಿಕೆ ಮಾಡಕೂಡದು.
10. ಯಾವ ವಿದ್ಯಾರ್ಥಿಗಳನ್ನು ಕೂಡ ನಿರ್ಲಕ್ಷಿಸದೇ ಅವರ ಜಾತಿ, ಮತ, ಕುಲಗಳ ಬಗ್ಗೆ ಭೇದ ಮಾಡದೆ, ಎಲ್ಲಾ ವಿದ್ಯಾರ್ಥಿಗಳು ಒಂದೇ ಎಂಬ ಭಾವನೆಯಿಂದ ಪರಸ್ಪರರಲ್ಲಿ ಐಕ್ಯಮತ ಇರುವಂತೆ ನೋಡಿಕೊಳ್ಳಬೇಕು.

ಒಬ್ಬ ಗುರು ಅಥವಾ ಶಿಕ್ಷಕನ ಸಫಲತೆ ಅವನ ವಿದ್ಯಾರ್ಥಿಗಳ ಸಫಲತೆಯಲ್ಲಿ ಇರುತ್ತದೆ. ಶಿಕ್ಷಕರು ಸದಾ ಚಟುವಟಿಕೆಯಿಂದ ಹೊಸ ಹೊಸ ಜ್ಞಾನ ಕೌಶಲ್ಯಗಳನ್ನು ಕಲಿತು ತಾವು ಕೂಡ ಕಾಲಕ್ಕೆ ತಕ್ಕ ಹಾಗೆ ನವ ನವೀನತೆಯನ್ನು ಅಳವಡಿಸಿಕೊಂಡು ತಮ್ಮನ್ನು ತಾವು ಬದಲಾಯಿಸಿಕೊಳ್ಳುತ್ತಾ ವಿದ್ಯಾರ್ಥಿಗಳಲ್ಲಿಯೂ ಕೂಡ ಬದಲಾವಣೆಯನ್ನು ತರಲು ಪ್ರಯತ್ನಪಡಬೇಕು. ಈ ಬದಲಾವಣೆಯೆಂಬ ಕ್ರಾಂತಿಯನ್ನು ತರಲು ಶಿಕ್ಷಕನಲ್ಲಿ ನಾಯಕತ್ವ ಗುಣಗಳು ಇರಲೇಬೇಕು. ಆಗ ಮಾತ್ರ ಉತ್ತಮ ಫಲಿತಾಂಶ ನಿರೀಕ್ಷಿಸಬಹುದು. ಇದರಲ್ಲಿ ಯಾವುದೇ ಸಂಶಯವಿಲ್ಲ. ●

- **ನೀವು ಯಾವುದೇ ಕೆಲಸವನ್ನು ಮಾಡುವಾಗಲೂ ನಿಮ್ಮ ಮನಸ್ಸು ಹೃದಯ, ನಿಮ್ಮ ಸರ್ವಸ್ವವನ್ನೂ ಆ ಕೆಲಸಕ್ಕೆ ಕೊಡಿ.**
- **ಶಕ್ತಿಯೇ ಜೀವನ, ದುರ್ಬಲತೆಯೇ ಮರಣ; ಶಕ್ತಿಯೇ ಪರಮಾನಂದ, ಅಖಂಡಜೀವನ, ಅಮರತ್ವ. ದುರ್ಬಲತೆಯೇ ಅನವರತ ದುಃಖ, ತಳಮಳ, ದುರ್ಬಲತೆಯೇ ಮರಣ.**
- **ಶಿಕ್ಷಣವೆಂದರೆ ಮೊದಲೇ ಮನುಷ್ಯನಲ್ಲಿ ಇರುವ ಪರಿಪೂರ್ಣತೆಯನ್ನು ಪ್ರಕಾಶಪಡಿಸುವುದು.**

**- ಸ್ವಾಮಿ ವಿವೇಕಾನಂದ**

# ಶ್ರೀರಾಮಮಂದಿರಕ್ಕೆ ಶುಭ ಮುಹೂರ್ತ

ಭಕ್ತರ ಇಚ್ಛೆ, ವಿನಂತಿಗಳನ್ನು ಮನ್ನಿಸುವುದರಲ್ಲಿ ಶ್ರೀರಾಮನು ಅಗ್ರಗಣ್ಯ ಎಂದು ಹೇಳಲಾಗಿದೆ. ರಾಮಭಕ್ತೆಯಾಗಿದ್ದ ಶಬರಿಗೆ ಆಕೆಯ ಗುರುವು, ಶ್ರೀರಾಮನು ನಿನ್ನ ಬಡಕುಟೀರಕ್ಕೆ ಬರುತ್ತಾನೆಂದೂ, ಆ ಕ್ಷಣವನ್ನು ನಿರೀಕ್ಷಿಸುತ್ತಿರು, ಎಂದೂ ಹೇಳಿದ್ದರಂತೆ. ಅದು ಸಫಲವಾದ ಇತಿಹಾಸ ನಮಗೆ ಗೊತ್ತು. ಅಂತೆಯೇ ಶ್ರೀರಾಮನು ಅಹಲ್ಯೆಗೆ (ಶಿಲಾರೂಪ) ತನ್ನ ಪಾದಸ್ಪರ್ಶಿಸಲು ಅವಕಾಶನೀಡಿ ಆಕೆಯ ಶಾಪವನ್ನು ಪರಿಹರಿಸಿದನೆಂದೂ ರಾಮಾಯಣದಲ್ಲಿ ಓದಿದ್ದೇವೆ. ಶ್ರೀರಾಮಜನ್ಮಸ್ಥಾನದಲ್ಲಿ ಶ್ರೀರಾಮನಿಗೆ ಭವ್ಯಮಂದಿರವೊಂದು ಎದ್ದುನಿಲ್ಲಬೇಕಾದ ಅದೇ ರೀತಿಯ ನಿರೀಕ್ಷೆಯ ಅಗತ್ಯತೆ ಕುರಿತೂ ಕಲಿಯುಗದ ಜನಸಮುದಾಯವು ಅದನ್ನೇ ಆಶಿಸಿತ್ತು ಎಂಬುದೂ ಸತ್ಯಸಂಗತಿಯೇ. ಜನರ ನಿರೀಕ್ಷೆ, ಆಸೆಯಂತೆ ದೇಶದ ಸರ್ವೋಚ್ಚ ನ್ಯಾಯಾಲಯವು ಅದೇ ಸ್ಥಳದಲ್ಲಿ ರಾಮಮಂದಿರ ಎದ್ದುನಿಲ್ಲಬೇಕೆಂಬ ಆಣತಿಯನ್ನು ನೀಡಿರುವುದು ಅತಿ ಸಂತೋಷದ ಸಂಗತಿ. ಆ ಫರ್ಮಾನ್ ಹೊರಟಿದ್ದು 9–11–2019ರಂದು. ಹಿಂದು ಸಮಾಜದ ಆ ಆಸೆ ಆಕಾಂಕ್ಷೆಯು ಸಫಲಗೊಂಡ ಆ ಮುಹೂರ್ತವನ್ನು ಸ್ವಾಗತ ಆದರಗಳನ್ನು ನೀಡಿ ಇಡೀ ಪ್ರಪಂಚ ಸ್ವೀಕರಿಸಿದೆ. ಶ್ರೀರಾಮಮಂದಿರ ಧ್ವಂಸದ ಹಳೆಯಕಥೆ ಅತಿದುಃಖದಾಯಕ. ಶ್ರೀರಾಮ ಜನಿಸಿದ್ದು, ತ್ರೇತಾಯುಗದಲ್ಲಿ; ಸ್ಥಾನ ಅಯೋಧ್ಯೆ, ಆತ ಅಲ್ಲಿ ಜನಿಸಿದ್ದೇ ತಡ ಅಯೋಧ್ಯೆಯು ಪೂಜ್ಯ ಹಾಗೂ ಪುಣ್ಯಪ್ರದವಾಯಿತು. ಆತ ಪರಲೋಕ ವಾಸಿಯಾದ ಮೇಲೂ ಅಯೋಧ್ಯೆಯಲ್ಲಿ ಶ್ರೀರಾಮನ ಆ ಜನ್ಮಭೂಮಿಯನ್ನು ಸಂದರ್ಶಿಸಿ, ಅರ್ಚಿಸುವ ಪೃಥೆ ನಡೆದುಬಂದೇ ಇತ್ತು. ಎಷ್ಟೋ ವರ್ಷಗಳ ನಂತರ ಸಾಮ್ರಾಟ್ ವಿಕ್ರಮಾದಿತ್ಯನ ಕಾಲಾವಧಿಯಲ್ಲಿ ಅಲ್ಲಿ ಭವ್ಯಮಂದಿರವೊಂದು ಎದ್ದುನಿಂತಿತು. ಅಂದಿನಿಂದ ಇಂದಿನವರೆಗೂ ಅಲ್ಲಿ ತೀರ್ಥಯಾತ್ರೆ ಮತ್ತು ನಿತ್ಯಪೂಜೆ ಇವುಗಳು ನಡೆಯುತ್ತಲೇ ಬಂದಿದೆ. ಆದರೂ ಅದು ಅಪವಾದ ಸಹಿತವಾದದ್ದು!

ವಿಕ್ರಮಾದಿತ್ಯನ ನಂತರದ ಉಜ್ಜೈನಿಯ ಸಾಮ್ರಾಟ್ ಗಡ್ಡಾವಾಲ್ ಎಂಬವರು ಶ್ರೀರಾಮಜನ್ಮಸ್ಥಳದಲ್ಲಿ ಭವ್ಯಮಂದಿರವೊಂದನ್ನು ನಿರ್ಮಿಸಿದ್ದೂ ಉಂಟು. ಅದು ಧ್ವಂಸಗೊಂಡದ್ದು 1528ರಲ್ಲಿ. ಬಾಬರನ ಸೇನಾಧಿಪತಿ ಮೀರ್‌ಬಾಕಿ ಎಂಬಾತನಿಂದ. ಆತ ಆ ಮಂದಿರ ಒಡೆದು ಮಸೀದಿ ನಿರ್ಮಿಸಿದ. ಅಂದಿನಿಂದ 9.11.2019ರವರೆಗೂ ಧರ್ಮನಿಷ್ಠ ಹಿಂದು ಸಮಾಜವು ರಾಮಜನ್ಮಸ್ಥಾನದಲ್ಲಿ ಮತ್ತೆ ರಾಮಮಂದಿರ ನಿರ್ಮಿಸುವ ತನ್ನ ಹಕ್ಕನ್ನು ಪೂರೈಸಲು ನ್ಯಾಯಾಲಯಗಳಲ್ಲಿ ಖಟ್ಲೆ ಹೂಡಿಕೊಂಡಿತ್ತು. ರಾಮಜನ್ಮಸ್ಥಾನದಲ್ಲಿಯೇ ರಾಮಮಂದಿರ ಕಟ್ಟಲು ನ್ಯಾಯಾಲಯ ಎಂದು ಹಸಿರುನಿಶಾನೆ ತೋರಿತೋ ಅಲ್ಲಿಯವರೆಗೆ, 1528ರಿಂದ 2019ರವರೆಗಿನ 491 ವರ್ಷಗಳ ಪೀಳಿಗೆಪೀಳಿಗೆಯ ಪರ್ಯಂತದ ದೇಶವಾಸಿಗಳು ತಮ್ಮ ಗಂಟಲನ್ನು ಅದುಮಿಹಿಡಿದಿದ್ದ ಸಂಕಟದಲ್ಲಿಯೇ ಕಳೆದರು ಎಂದೇ ಹೇಳಬೇಕು. ಮರ್ಯಾದಾ ಪುರುಷೋತ್ತಮ ಶ್ರೀರಾಮನು ಈ ಸಮಯದಲ್ಲಿ ತನ್ನ ಭಕ್ತರ ಮನೋಧೈರ್ಯವನ್ನು ಪರೀಕ್ಷಿಸಲೆಂದೇ ಹೊರಟಿದ್ದ ಎನ್ನಲಾಗುತ್ತಿದೆ. ಶ್ರೀರಾಮಜನ್ಮಭೂಮಿ ಮುಕ್ತಿ ಆಂದೋಲನವು ವಾಸ್ತವವಾಗಿ, ಹಿಂದು ಸಮಾಜಕ್ಕೆ ಶ್ರೀರಾಮನು ನೀಡಿದ್ದ ಕಠಿಣಪರೀಕ್ಷೆಯೇ ಎಂದರೆ ತಪ್ಪಲ್ಲ. ಮೀರ್‌ಬಾಕಿಯು 1528ರಲ್ಲಿ ಮಂದಿರ ಧ್ವಂಸಮಾಡಿದ ಕ್ಷಣದಿಂದ ಇಲ್ಲಿಯವರೆಗೂ ಹಿಂದುಸಮಾಜವು ಶ್ರೀರಾಮಚಂದ್ರನು ತಮ್ಮ ಎದುರು ಇಟ್ಟಿದ್ದ ಸವಾಲನ್ನು ಧೈರ್ಯದಿಂದ ಸ್ವೀಕರಿಸಿ ಹೋರಾಡುತ್ತಲೇ ಬಂದಿದೆ. 1947ರ ದೌರ್ಭಾಗ್ಯ ಪ್ರಸಂಗವಾದ ಜಾತಿಯಾಧಾರಿತ ದೇಶವಿಭಜನೆಯ ನಂತರದಲ್ಲೂ ಹಿಂದುಸಮಾಜವು ಧೈರ್ಯದ ನಿಶಾನೆ ಹಿಡಿದೇ ಹೋರಾಟ ಸಾಗಿಸಿಕೊಂಡೇ ಬಂತು. ವಿಭಜನೆಯ ಪರಿಣಾಮವಾಗಿ ಎದ್ದು ನಿಂತ ಪಾಕಿಸ್ತಾನ, ಬಾಂಗ್ಲಾದೇಶಗಳಲ್ಲಿ ಹಿಂದುಗಳ ನೂರಾರುಸಾವಿರ ದೇವಾಲಯಗಳು ಧ್ವಂಸಗೊಂಡರೆ, ಭಾರತ ದೇಶವು ಇದಕ್ಕೊಂದು ಅಪವಾದವಾಗಿ ವಿಜೃಂಭಿಸಿದೆ. ಭಾರತದಲ್ಲಿನ ಶ್ರೀರಾಮಜನ್ಮಭೂಮಿ ಸಂಘರ್ಷವು 1950ರಲ್ಲಿ ನ್ಯಾಯಾಲಯಗಳ ಮಾಧ್ಯಮದಲ್ಲಿ ಆರಂಭಗೊಂಡಿತು. 1950–2019–ಅರ್ಥಾತ್ 69 ವರ್ಷಗಳ ಅವಧಿಯ ನಂತರದಲ್ಲಿ ನ್ಯಾಯಾಲಯದ ಮೂಲಕವೇ ಈ ಸಮಸ್ಯೆಗೆ ಪರಿಹಾರ ದೊರಕಿದ್ದಲ್ಲದೆ ರಾಮಜನ್ಮಭೂಮಿಯಲ್ಲೇ ರಾಮಮಂದಿರ ನಿರ್ಮಾಣಕ್ಕೆ ಅನುಮತಿ, ಸಹಮತಿ ದೊರೆತದ್ದು ಆನಂದದ ಸಂದರ್ಭವೇ ಸರಿ.

9.11.2019ರ ನ್ಯಾಯಾಲಯದ ತೀರ್ಪು ಒಂದು ಹೆಸರಾಂತ ಘಟ್ಟ. ಏಕೆಂದರೆ ಅಂದಿನಿಂದಲೂ ಹಿಂದುಮುಸಲ್ಮಾನರ ನಡುವಣ ಸಂಘರ್ಷದ ಹಳೆಯಪರ್ವವು ಕೊನೆಗೊಂಡಂತಾಗಿದೆ. ಈ ಬೆಳವಣಿಗೆಯು ಐತಿಹಾಸಿಕವಾದದ್ದು, ಪ್ರಜಾತಂತ್ರೀಯ ವಾದದ್ದು ಎಂದೇ ಹೇಳಬೇಕಾಗಿದೆ. ಅಲ್ಲೊಂದು, ಇಲ್ಲೊಂದು ಅಪವಾದಬಿಟ್ಟರೆ, ಇಡೀದೇಶವು ನ್ಯಾಯಾಲಯದ ತೀರ್ಪನ್ನು ಮುಕ್ತಮನಸ್ಸಿನಿಂದ ಸ್ವಾಗತಿಸಿದೆ. ಇದರಿಂದಾಗಿ ಹಿಂದುವು ಅನ್ಯಾಯಪಕ್ಷದಲ್ಲಿಲ್ಲ, ಆತ ನ್ಯಾಯದಪಕ್ಷದಲ್ಲೇ ಉಳಿದಿದ್ದಾನೆ ಎಂಬುದು ಸ್ಪಷ್ಟವಾಗಿ ತಿಳಿದುಬಂದಿದೆ. ಹಿಂದುವು ಶಕ್ತಿ, ಇಲ್ಲವೇ ಒತ್ತಾಯ, ದಬ್ಬಾಳಿಕೆಗಳ ಮಾರ್ಗ ಅವಲಂಬಿಸಲಿಲ್ಲ ಎಂಬುದು ಸ್ಪಷ್ಟವಾಗಿ ತಿಳಿದುಬಂದಿದೆ; ನಾವು ಶ್ರೀರಾಮನ ಶಾಂತಿಪಥದಲ್ಲೇ ಮುಂದುವರಿಯುತ್ತಿದ್ದೇವೆ, ಎಂಬುದೂ ಅರಿವಾಗಿದೆ. ಈ ವಿಜಯ ಶ್ರೀರಾಮನದ್ದೇ. ಜನ್ಮಸ್ಥಾನ ನಮ್ಮದೆಂದು ಹೋರಾಡುವ, ಜನರದಲ್ಲ. ಒಟ್ಟಾರೆ, ಈ ಫಲಿತಾಂಶವು ಶ್ರೀರಾಮನದೇ ವಿಜಯ. ಅಯೋಧ್ಯೆಯ ಜನ್ಮಸ್ಥಾನದಲ್ಲೇ ಶ್ರೀರಾಮನಿಗಾಗಿ

ಪುಟ 10 ಕ್ಕೆ ➤

➢ ಪುಟ 9 ರಿಂದ.....

ಭವ್ಯಮಂದಿರವೊಂದು ಶೀರ್ಘದಲ್ಲೇ ಎದ್ದುನಿಲ್ಲಲಿದೆ. ಶ್ರೀರಾಮನ ಈ ವಿಜಯವು ನಮ್ಮೆಲ್ಲರ ವಿಜಯ, ಯಾರದ್ದೂ ಪರಾಜಯ ಅಲ್ಲ.

ವಾರಣಾಸಿ — ಓಂ ಪ್ರಕಾಶ್‌ಸಿಂಹ
1.12.2019 — ಸಂಪಾದಕ, 'ಚೇತನಾಪ್ರವಾಹ'

## 490 ವರ್ಷಗಳ ಹೋರಾಟಕ್ಕೆ ಜಯ

ಜನ್ಮಭೂಮಿಸ್ಥಳವನ್ನು ಪರೀಕ್ಷೆಮಾಡಿದ್ದ ಇಎಸ್‌ಐ ಅಧಿಕಾರಿ ಡಾ॥ ಮೊಹಮ್ಮದ್ ಕೆ.ಕೆ ಸಲ್ಲಿಸಿದ್ದ ವರದಿ, ತೀರ್ಪಿನ ಹಿನ್ನೆಲೆಯಲ್ಲಿ ಬಹುಮುಖ್ಯ ಪಾತ್ರ ವಹಿಸಿದೆ. ವಿವಾದಿತ ಕಟ್ಟಡ ಕಟ್ಟಿದ ಜಾಗದಲ್ಲಿ ಹಿಂದೊಮ್ಮೆ ಹಿಂದುದೇವಸ್ಥಾನವಿತ್ತು ಎಂಬುದಕ್ಕೆ ಪೂರಕ ದಾಖಲೆಗಳು ಸಿಕ್ಕಿರುವುದು ಅಲ್ಲೇ. ದೇವಸ್ಥಾನದ ಕಂಬಗಳು, ಕಟ್ಟಡರಚನೆ ಹೀಗೆ ವಿವಿಧ ಪುರಾವೆಗಳು ಭೂಮಿಯಡಿಯಿಂದ ಹೆಕ್ಕಿ ತೆರೆದದ್ದು ಎನ್ನುತ್ತಾರೆ, ಕೆ.ಕೆ.ಮೊಹಮ್ಮದ್. ಅಲಹಾಬಾದ್ ಹೈಕೋರ್ಟ್ ಜನ್ಮಭೂಮಿಯನ್ನು ಮೂರು ಭಾಗಗಳಾಗಿ ಹೋಳುಮಾಡಿ ಹಂಚಿತ್ತು. ಹೈಕೋರ್ಟ್ ಹೀಗೆ ಹಂಚಿರುವುದು ಸರಿಯಲ್ಲ ಎಂದೂ ಸುಪ್ರೀಂಕೋರ್ಟ್ ಅಭಿಪ್ರಾಯಪಟ್ಟಿದೆ. ಕೋರ್ಟ್ ಹಾಗೆ ಅಭಿಪ್ರಾಯಪಟ್ಟಿದ್ದೂ ಸಮಂಜಸವೇ. ಜನ್ಮಭೂಮಿಯನ್ನು ಮೂರುಜನರಿಗೆ ಅದರ ಮೇಲೆ ಹಕ್ಕಿದೆ ಎಂಬಂತಾಗುತ್ತದೆ. ಜನ್ಮಭೂಮಿಯಲ್ಲಿ ರಾಮನಮಂದಿರ ನಿರ್ಮಾಣವಾಗಬೇಕಿರುವುದು ಮುಖ್ಯ ವಿಷಯವೇ ಹೊರತು ಮೂವರನ್ನೂ ಸಮಾಧಾನಪಡಿಸುವುದಲ್ಲ. ಸರ್ಕಾರವು ಮುಂದಿನ 3 ತಿಂಗಳ ಒಳಗಾಗಿ ಟ್ರಸ್ಟ್ ರಚಿಸಿ ಜನ್ಮಸ್ಥಾನವನ್ನು ಹಸ್ತಾಂತರಿಸಬೇಕೆಂಬುದು ಕೋರ್ಟ್ ತೀರ್ಪು. ಇದು ಅತ್ಯಂತ ಸಮಂಜಸವಾಗಿದೆ. ಅಯೋಧ್ಯೆಯಲ್ಲಿ ನಿರ್ಮಾಣವಾಗಲಿರುವ ದೇವಸ್ಥಾನಕ್ಕೆ ವರ್ಷಕ್ಕೆ ಲಕ್ಷಾಂತರ ಯಾತ್ರಾರ್ಥಿಗಳು ಆಗಮಿಸಲಿದ್ದಾರೆ. ಕಾಣಿಕೆ ರೂಪದಲ್ಲಿ ನೂರಾರು ಕೋಟಿ ರೂ. ಸಂಗ್ರಹವಾಗುತ್ತದೆ. ಭಕ್ತರಿಗೆ ವಸತಿ, ಆಹಾರ, ಸುರಕ್ಷತೆ ಇತ್ಯಾದಿ ವಿಷಯಗಳನ್ನು ನೋಡಿಕೊಳ್ಳಲು ಸಮರ್ಥವಾದ ಮತ್ತು ಪಾರದರ್ಶಕ ಟ್ರಸ್ಟ್ ಅಗತ್ಯ. ಈ ಹಿನ್ನೆಲೆಯಲ್ಲಿ ದೇವಸ್ಥಾನದ ಆಡಳಿತವನ್ನು ನೇರವಾಗಿ ವೈಯುಕ್ತಿಕ ವ್ಯಕ್ತಿ/ಸಂಸ್ಥೆಗೆ ನೀಡದಿರುವುದು ಉತ್ತಮ ನಡೆ.

### ಸುಪ್ರೀಂಕೋರ್ಟ್ ತೀರ್ಪಿನ ಮುಖ್ಯಾಂಶ (9.11.2019)

- ಇಡೀ ವಿವಾದಿತ ಭೂಮಿ ಒಂದೇ ಭಾಗ.
- ರಾಮ ಅಯೋಧ್ಯೆಯಲ್ಲೇ ಹುಟ್ಟಿದ್ದ ಬಗ್ಗೆ ವಿವಾದ ಇಲ್ಲ.
- ಚಬೂತರ್, ಸೀತಾ ರಸೋಯಿ, ಭಂಡಾರಗಳೆಲ್ಲಾ ರಾಮನ ಹುಟ್ಟಿಗೆ ಸಾಕ್ಷಿ.
- ವಿವಾದಿತ ಪ್ರದೇಶದಲ್ಲಿ ಹಿಂದೂಗಳು ಪರಿಕ್ರಮವನ್ನೂ ಮಾಡುತ್ತಿದ್ದರು.
- ವಿವಾದಿತ ಜಾಗದಲ್ಲೇ ಹಿಂದು- ಮುಸ್ಲಿಮರು ಪ್ರಾರ್ಥನೆ ಸಲ್ಲಿಸುತ್ತಿದ್ದರು.
- ಇತಿಹಾಸಕಾರರ ವಿವರಣೆ, ಯಾತ್ರಿಗಳ ಅಭಿಪ್ರಾಯ, ಪುರಾತತ್ವ ಸಾಕ್ಷ್ಯ ಹಿಂದೂಗಳ ಪರವೇ ಇದೆ.
- ತನ್ನ ದಾವೆ ಸರಿಯಾಗಿ ಹೂಡುವಲ್ಲಿ ಸುನ್ನಿವಕ್ಫ್ ಬೋರ್ಡ್ ವಿಫಲವಾಗಿದೆ
- ವಿವಾದಿತಭೂಮಿಯ ನಿರ್ವಹಣಾ ಹಕ್ಕನ್ನು ಪಡೆಯಲು ಸುನ್ನಿ ವಕ್ಫ್ ಬೋರ್ಡ್ ಕೆಲ ಅವಶ್ಯಕತೆಯನ್ನು ಪೂರೈಸುವುದಿಲ್ಲ.
- ಮಸೀದಿ ಅಡಿಪಾಯದ ಕೆಳಗೆ ವಿಶಾಲರಚನೆ ಇತ್ತು.
- ಅನಾದಿಕಾಲದಿಂದಲೂ ರಾಮಜನ್ಮಭೂಮಿಯ ಹೊರಭಾಗದಲ್ಲಿ ಹಿಂದೂಗಳು ಪೂಜೆ ಸಲ್ಲಿಸುತ್ತಿದ್ದಾರೆ ಎಂಬುದಕ್ಕೆ ಸಾಕ್ಷಿಯಿದೆ.
- ಡಿಸೆಂಬರ್ 6, 1992ರ ತನಕ ವಿವಾದಿತ ಭೂಮಿಯಲ್ಲಿ ಮಸೀದಿಯಿತ್ತು ಎಂಬುದರಿಂದ ವಿವಾದಿತ ಪ್ರದೇಶದ ನಿರ್ವಹಣಾ ಹಕ್ಕು ಹೊಂದಲು ಅದಕ್ಕೆ ಸಾಧ್ಯವಿಲ್ಲ. ಏಕೆಂದರೆ ಮಸೀದಿಯ ಒಳಭಾಗದ ಬಗ್ಗೆಯೂ ವಿವಾದ ಇದೆ.
- ಕೊನೆಯ ಬಾರಿ ಮುಸ್ಲಿಮರು ನಮಾಜ್ ಸಲ್ಲಿಸಿದ್ದು 16 ಡಿಸೆಂಬರ್ 1949ರವರೆಗೂ ಎಂದಿದ್ದರೂ, 1856–57ರ ವೇಳೆ ಮುಸ್ಲಿಮರಿಂದ ಪ್ರಾರ್ಥನೆ ನಡೆಯುತ್ತಿತ್ತು ಎಂಬುದಕ್ಕೆ ಯಾವುದೇ ಸಾಕ್ಷಿಯಿಲ್ಲ.
- ಹಾಗಾಗಿ ವಿವಾದಿತ ಭೂಮಿಯು ರಾಮನ ಜನ್ಮ ಭೂಮಿಯೇ.
- ಪುರಾತತ್ವ ಇಲಾಖೆ ನಡೆಸಿದ ಉತ್ಖನನ ವೇಳೆ ಸಿಕ್ಕ ಕಲಾಕೃತಿಗಳು ಇಸ್ಲಾಮಿಕ್ ರಚನೆ ಆಗಿರಲಿಲ್ಲ.
- ಉತ್ಖನನ ವೇಳೆ 17 ಸಾಲಿನ 85 ಸ್ತಂಭಗಳು ಪತ್ತೆಯಾಗಿದ್ದು, ಕಲಾಕೃತಿಗಳ ರಚನೆ 12ನೇ ಶತಮಾನದ ಹಿಂದೂಧರ್ಮದ ದೇವಾಲಯಗಳ ರಚನೆಯನ್ನು ಹೋಲುತ್ತಿತ್ತು.
- ಬಾಬ್ರಿಮಸೀದಿ ಖಾಲಿ ಸ್ಥಳದಲ್ಲಿ ನಿರ್ಮಾಣವಾಗಿರಲಿಲ್ಲ.
- ವಿವಾದಿತ ಜಾಗದಲ್ಲಿ ಈ ಹಿಂದೆಯೇ ಇದ್ದ ಸ್ತಂಭ ಹಾಗೂ ಅಡಿಪಾಯಗಳನ್ನು ಬಳಸಿಕೊಂಡು ಮಸೀದಿಯನ್ನು ಕಟ್ಟಲಾಗಿತ್ತು.
- ಮಸೀದಿಯ ಪ್ರಮುಖ ಗುಂಬಜ್ ಅನ್ನು ರಾಮಜನ್ಮಸ್ಥಳ ಎಂದು ನಂಬುತ್ತಾರೆ
- ಮಸೀದಿಯ ಒಳಭಾಗ ಹಿಂದುಗಳ ಪೂಜಾಸ್ಥಳವಾಗಿತ್ತು.
- ಅನಾದಿಕಾಲದಿಂದಲೂ ಹಿಂದುಗಳು ಹೊರಗಡೆ ಪೂಜೆ ಸಲ್ಲಿಸುತ್ತಿದ್ದಾರೆ.
- ಪುರಾತತ್ವ ವರದಿಯು ರಾಮಮಂದಿರವನ್ನು ಒಡೆದು ಮಸೀದಿಯು ಕಟ್ಟಲಾಗಿತ್ತು ಎಂಬುದರ ಬಗ್ಗೆ ಯಾವುದೇ ಮಾಹಿತಿ ನೀಡುವುದಿಲ್ಲ.

ಮುಂದಿನ ಸಂಚಿಕೆಗೆ....➢

## ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ

# ಕಾರ್ಯಕಾರಿಣಿ ಮತ್ತು ಸಾಮಾನ್ಯ ಸಭೆ ವರದಿ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಕಾರಿಣಿ ಸದಸ್ಯರ ಸಭೆ ಮತ್ತು ಸಾಮಾನ್ಯ ಸಭೆ ದಿನಾಂಕ 30.11.2020ರ ಭಾನುವಾರದಂದು ಬೆಂಗಳೂರಿನ ಕೇಂದ್ರ ಕಛೇರಿ ಯಾದವಸ್ಮೃತಿ, ಶೇಷಾದ್ರಿಪುರಂನಲ್ಲಿ ಜರುಗಿತು.



ಈ ಕಾರ್ಯಕ್ರಮಕ್ಕೆ ಎ.ಬಿ.ಆರ್.ಎಸ್.ಎಮ್ ನ ಸಂಘಟನಾ ಮಂತ್ರಿಗಳಾದ ಶ್ರೀಯುತ ಮಹೇಂದ್ರ ಕಪೂರ್‌ರವರು, ಎ.ಬಿ.ಆರ್.ಎಸ್.ಎಮ್. ನ ಸಂಸ್ಥಾಪಕರಲ್ಲಿ ಒಬ್ಬರಾದ ಶ್ರೀಯುತ ಕೃ ನರಹರಿಯವರು, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಯುತ ಶಿವಾನಂದ ಸಿಂಧನಕೇರರವರು, ರಾಜ್ಯಾಧ್ಯಕ್ಷರು, ಕಾರ್ಯದರ್ಶಿಗಳು, 17 ಜಿಲ್ಲೆಗಳಿಂದ ಜಿಲ್ಲಾ ಪ್ರತಿನಿಧಿಗಳು ಭಾಗವಹಿಸಿದ್ದರು. ಶಾರದೆಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರೊಂದಿಗೆ ಕಾರ್ಯಕ್ರಮದ ಶುಭಾರಂಭ ವಾಯಿತು.

ಸರಸ್ವತಿವಂದನೆಯನ್ನು ರಾಜ್ಯದ ಉಪಾಧ್ಯಕ್ಷರಾದ ಕೊಟ್ರಪ್ಪನವರು ಮಾಡಿದರು. ಸಭಾ ಉಪಸ್ಥಿತರನ್ನು ಸಹ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಗಂಗಾಧರ್ ಆಚಾರಿಯವರು ಸ್ವಾಗತಿಸಿದರು. ಕಾರ್ಯದರ್ಶಿಗಳ ವರದಿಯನ್ನು ಮಂಡನೆ ಮಾಡಿ, ಒಪ್ಪಿಗೆ ಪಡೆಯಲಾಯಿತು. ವರ್ಷದ ವಾರ್ಷಿಕ ಯೋಜನೆಯನ್ನು ಶ್ರೀಯುತ ಜೆ.ಎಂ. ಜೋಷಿಯವರು ಸಭೆಯ ಮುಂದೆ ಪ್ರಸ್ತುತ ಪಡಿಸಿ, ಒಪ್ಪಿಗೆಯನ್ನು ಪಡೆದರು. ನಂತರದ ಅವಧಿಯಲ್ಲಿ ಜಿಲ್ಲೆಯ ವಿವಿಧ ಭಾಗಗಳಲ್ಲಿ ನಡೆದಿರುವ ಕಾರ್ಯಕ್ರಮಗಳ ಜಿಲ್ಲಾವಾರು ವರದಿಯನ್ನು ಜಿಲ್ಲಾಧ್ಯಕ್ಷರು ನೀಡಿದರು. ಶ್ರೀಯುತ ಶಿವಾನಂದ ಸಿಂಧನಕೇರಾರವರು ಮುಂಬರುವ ಕಾರ್ಯಕ್ರಮಗಳ ಬಗ್ಗೆ ಸಭೆಗೆ ತಿಳಿಸಿದರು.

ನಂತರ ಪದವೀಧರ ಮತ್ತು ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾಗಿರುವ ನೂತನ ಶಿಕ್ಷಕ ಪ್ರತಿನಿಧಿಗಳನ್ನು ಕಾರ್ಯಕ್ರಮಕ್ಕೆ ಸ್ವಾಗತಿಸಲಾಯಿತು. ನಂತರ ದಕ್ಷಿಣ ಕ್ಷೇತ್ರಿಯ ಪ್ರಮುಖರಾದ ಶ್ರೀಯುತ ಬಾಲಕೃಷ್ಣ ಭಟ್‌ರವರು ಶಿಕ್ಷಕ ಸಂಘದ ಕಾರ್ಯಚಟುವಟಿಕೆಗಳ ವಿವರವನ್ನು ನೂತನ ಪ್ರತಿನಿಧಿಗಳಿಗೆ ನೀಡಿದರು. ನೂತನವಾಗಿ ಆಯ್ಕೆಯಾಗಿರುವ ಪ್ರತಿನಿಧಿಗಳನ್ನು ಅಭಿನಂದಿಸಲಾಯಿತು. ಎ.ಬಿ.ಆರ್.ಎಮ್.ಎಸ್.ನ ಸಂಘಟನಾ ಮಂತ್ರಿಗಳಾದ ಶ್ರೀಯುತ ಮಹೇಂದ್ರಕಪೂರ್‌ರವರು ಶಿಕ್ಷಕ ಪ್ರತಿನಿಧಿಗಳು ಶಿಕ್ಷಕ ಸಂಘದ ಜೊತೆ ಹೊಂದಾಣಿಕೆಯಿಂದ ಸೇವೆ ಮಾಡಬೇಕು, ದೇಶದ ವಿವಿಧ ಭಾಗಗಳಲ್ಲಿ ಪ್ರತಿನಿಧಿಗಳು ಸಂಘಟನೆಯ ಜೊತೆಜೊತೆಯಾಗಿ ಹೇಗೆ ಸೇವೆ ಸಲ್ಲಿಸುತ್ತಿದ್ದಾರೆಂಬುದನ್ನು ಸವಿವರವಾಗಿ ಸಭೆಗೆ ತಿಳಿಸಿದರು. ಕೊನೆಯದಾಗಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕ್ಷೇತ್ರಿಯ ಕಾರ್ಯವಾಹರಾದಂತಹ ಶ್ರೀಯುತ ತಿಪ್ಪೇಸ್ವಾಮಿಯವರು ಶಿಕ್ಷಕ ಸಂಘಟನೆಯ ಪ್ರಮುಖರು ಹಾಗು ಶಿಕ್ಷಕ ಪ್ರತಿನಿಧಿಗಳು ಸಮಾಜದೆದುರಿಗೆ ಹೇಗಿರಬೇಕು? ಸಮಾಜ ಇವರಿಂದ ಬಯಸುವುದೇನು? ಶೈಕ್ಷಣಿಕ ಕ್ಷೇತ್ರದ ಬದಲಾವಣೆಯಲ್ಲಿ ಶಿಕ್ಷಕ ಪ್ರತಿನಿಧಿಗಳು ಮತ್ತು ಶಿಕ್ಷಕ ಸಂಘಟನೆಯ ಕಾರ್ಯಕರ್ತರ ಪಾತ್ರವೇನೆಂಬುದನ್ನು ಸಭೆಗೆ ತಿಳಿಸಿದರು. ನಂತರ ವಂದನಾರ್ಪಣೆಯೊಂದಿಗೆ ಆ ಅವಧಿ ಸಮಾಪ್ತಿಯಾಯಿತು.

ಮಧ್ಯಾಹ್ನದ ಊಟದ ನಂತರ ಶಿಕ್ಷಕ ಸಂಘಟನೆಯ ಆನ್‌ಲೈನ್ ಸದಸ್ಯತ್ವ ಹೇಗೆ ಪಡೆಯಬೇಕೆಂಬುದರ ಬಗ್ಗೆ ಪೂರ್ಣ ಮಾಹಿತಿಯನ್ನು ನೀಡಲಾಯಿತು. ಕೋವಿಡ್ ಸಂಧರ್ಭದಲ್ಲಿಯೂ ಸಹ ಸಂಘಟನೆ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದು, ಸಂಘಟನೆಗೆ ಸದಸ್ಯತ್ವವೇ ಬಲವಾಗಿರುವುದರಿಂದ ಆನ್ಲೈನ್ ಸದಸ್ಯತ್ವದಲ್ಲಿ ಸಕ್ರಿಯವಾಗಿ ಕಾರ್ಯಕರ್ತರು ಭಾಗವಹಿಸಲು ಕರೆ ನೀಡಲಾಯಿತು. ನಂತರದ ಸಮಾರೋಪ ಸಮಾರಂಭದಲ್ಲಿ ಶ್ರೀಯುತ ಮಹೇಂದ್ರ ಕಪೂರ್‌ರವರು ದೇಶದ ಅನ್ಯ ರಾಜ್ಯದಲ್ಲಿ ಸದಸ್ಯತ್ವ ಹೇಗೆ ನಡೆಯುತ್ತಿದೆ, ಚೈತನ್ಯ ತುಂಬಿದ ಸದಸ್ಯತ್ವ ಮಾಡುವುದು ಹೇಗೆ ಎಂದು ಸಭೆಗೆ ತಿಳಿಸಿದರು.

ನಂತರದ ಅವಧಿಯಲ್ಲಿ ಸಂಘಟನೆಯ ಕಾರ್ಯಾಧ್ಯಕ್ಷರಾದ ಶ್ರೀಯುತ ಅರುಣ್‌ಶಹಾಪೂರ್‌ರವರು ಶಿಕ್ಷಕರ ಮುಂದಿರುವ ಸಮಸ್ಯೆಗಳು ಹಾಗೂ ಸಮಾಧಾನಗಳೇನು ಎಂಬುದರ ಬಗ್ಗೆ ಸವಿವರ ಚರ್ಚೆ ನಡೆಯಿತು. ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆಯೂ ವಿವರ ನೀಡಿದರು. ಶಿಕ್ಷಕರು ತಮಗೆ ಬಂದಿರುವ ಸಮಸ್ಯೆಗಳನ್ನು ಯಾವ ರೀತಿಯಾಗಿ ಪರಿಹರಿಸಿಕೊಳ್ಳಲು ಪ್ರಯತ್ನಿಸಬೇಕು ಎಂಬುದರ ಬಗ್ಗೆಯೂ ವಿವರ ನೀಡಿದರು.

ನಂತರ ಶಾಂತಿಮಂತ್ರದೊಂದಿಗೆ ಕಾರ್ಯಕಾರಿಣಿ ಮುಕ್ತಾಯಗೊಂಡಿತು.

MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-12-2020 Date of Posting 20th or 21st of every month Posted at Periodical Rate

# ಕಾರ್ಯಕಾರಿಣಿ ಮತ್ತು ಸಾಮಾನ್ಯ ಸಭೆ









**ಗಮನಿಸಿ**

ಶಿಕ್ಷಕ ಸಮಾಚಾರದ ಹೊಸ ಸಂಚಿಕೆಯ ಬಗ್ಗೆ ಅನಿಸಿಕೆ, ಅಭಿಪ್ರಾಯಗಳನ್ನು ಪ್ರತಿ ಸಂಚಿಕೆ 5ನೇ ತಾರೀಖಿನೊಳಗೆ akss1950@gmail.com Emailಗೆ ಕಳುಹಿಸಿಕೊಡಿ. ಉತ್ತಮ ಅನಿಸಿಕೆ, ಅಭಿಪ್ರಾಯವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com